MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER · VOICE OF THE NATION

ಕನ್ನಡ ದಿನಪತ್ರಿಕೆ “ಇದು ರಾಷ್ಟ್ರದ ಧ್ವನಿ”

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

| ಸಂಪುಟ: 04 | ಸಂಚಿಕೆ: 293 | ಭಾನುವಾರ :07-09-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00 |
|---|---|---|---|---|---|---|
| VOLUME: 04 | ISSUE: 293 | SUNDAY : 07-09-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00 |

## ತುಂಗಭದ್ರಾ ನದಿಯ ಗೇಟ್ ಅಳವಡಿಕೆ ವಿಳಂಬ ಖಂಡಿಸಿ ಸೆ.8ರಂದು ಮುನಿರಾಬಾದ್ ನೀರಾವರಿ ಕಚೇರಿ ಮುಂದೆ ರೈತರಿಂದ ಪ್ರತಿಭಟನೆ

**ಯುವ ಮಾರ್ಗ ಸುದ್ದಿ**




**ಸಿರವಾರ, ಸೆ.6–** ಈ ಭಾಗದ ರೈತರ ಜೀವನಾಡಿಯಾಗಿರುವ ತುಂಗಭದ್ರಾ ನದಿಯ 33 ಹೊಸ ಗೇಟ್ ಗಳ ಅಳವಡಿಕೆ ಕಾರ್ಯ ವಿಳಂಬವಾಗುತ್ತಿದ್ದು ರಾಜ್ಯ ಸರಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ ಈ ಭಾಗದ ರೈತರ ಬಗ್ಗೆ ಸರ್ಕಾರ ತೋರುತ್ತಿರುವ ನಿರ್ಲಕ್ಷ್ಯವನ್ನು ಖಂಡಿಸಿ ಇದೆ ಸೆ.8ರಂದು ತುಂಗಭದ್ರಾ ಎಡದಂಡೆ ನಾಲೆ ಅಚ್ಚುಕಟ್ಟು ಪ್ರಾಧಿಕಾರದ ಮುನಿರಾಬಾದ್ ನೀರಾವರಿ ಕಛೇರಿ ಮುಂದೆ ಬೃಹತ್ ಪ್ರತಿಭಟನೆಗೆ ಎಲ್ಲಾ ರೈತರು ಭಾಗವಹಿಸಬೇಕು ಎಂದು ಮಾಜಿ ಶಾಸಕ ಗಂಗಾಧರ ನಾಯಕ ಹಾಗೂ ರೈತ ಮುಖಂಡರಾದ ಜೆ.ಶರಣಪ್ಪಗೌಡ ಹೇಳಿದರು. ಅವರು ಶುಕ್ರವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಈ ವರ್ಷ ಎರಡನೇ ಬೆಳೆಗೆ ನೀರು ಇಲ್ಲ ಎಂದು ಸಚಿವರಾದ ಶಿವರಾಜ ತಂಗಡಿ ಹೇಳಿದ್ದು, ರೈತರ ಆದಾಯ ಕಡಿವಾಣ ಹಾಕಿದೆ, ಪಕ್ಷಾತೀತವಾಗಿ ರೈತ ಸಂಘಟನೆಯ ಸಹಕಾರಿಂದ ಬೃಹತ್ ಹೋರಾಟ, ಎಲ್ಲಾ ಗೇಟ ದುರಸ್ತಿ ಮಾಡಬೇಕು, 16ಲಕ್ಷ ಎಕರೆ ಬೇಸಿಗೆ ಬೆಳೆಗೆ ನೀರು ಇಲ್ಲ, ಸರಕಾರ ನಿರ್ಲಕ್ಷ್ಯ , ರೈತರ ಬಗ್ಗೆ ಕಾಳಜಿ ಇಲ್ಲ, ಜನರು ದೊಡ್ಡ ಶಕ್ತಿ ತೋರಿಸಬೇಕು, ಸರಕಾರದ ಕಣ್ಣು ತೆರೆಸಬೇಕು, ನವಲಿ ಜಲಾನಯ ನಿರ್ಮಾಣ, ಮುಖ್ಯ ಕಾಲುವೆ ಹಾಗೂ ಉಪ ಕಾಲುವೆಯ ಗೇಟ್ ಗಳು ಹಾಳಾಗಿವೆ ಅವುಗಳನ್ನು (2ನೇಪುಟಕ್ಕೆ)

## ಜಿಲ್ಲಾ, ತಾಲೂಕು ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

# ಶಿಕ್ಷಕ ಸಮೂಹದ ಶ್ರಮ ಶ್ಲಾಘನೀಯ: ಎನ್.ಎಸ್.ಬೋಸರಾಜು

**ಯುವ ಮಾರ್ಗ ಸುದ್ದಿ**



**ರಾಯಚೂರು,ಸೆ.6–**ನಾನಾ ದೇಶಗಳೊಂದಿಗೆ ಸ್ಪರ್ಧೆ ಮಾಡಲು ನಮಗೆ ಶಿಕ್ಷಣವು ತುಂಬಾ ಅವಶ್ಯಕವಾಗಿದೆ. ಈ ದಿಶೆಯಲ್ಲಿ ಯೋಚಿಸಿದಾಗ ನಿರಂತರವಾಗಿ ಮಕ್ಕಳ ಕಲಿಕೆಯಲ್ಲಿ ತೊಡಗುವ ಶಿಕ್ಷಕ ಸಮೂಹದ ಶ್ರಮ ಶ್ಲಾಘನೀಯವಾಗಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್.ಎಸ್.ಬೋಸರಾಜು ಅವರು ಹೇಳಿದರು.

ಶನಿವಾರ ದಂದು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ 2025–26ನೇ ಸಾಲಿನ ರಾಯಚೂರು ಜಿಲ್ಲಾ ಹಾಗೂ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸರ್ವಪಲ್ಲಿ ರಾಧಕೃಷ್ಣನ್ ಅವರು ಈ ನಾಡು ಕಂಡ ಶ್ರೇಷ್ಠ ಶಿಕ್ಷಣ ತಜ್ಞರಾಗಿದ್ದಾರೆ. ಅವರ ಆಚಾರ, ವಿಚಾರ ಮತ್ತು ಅವರ ಸಂದೇಶಗಳನ್ನು ಪಾಲಿಸುವ ಮೂಲಕ ಉತ್ತಮವಾದ ಭವಿಷ್ಯ ರೂಪಿಸಬೇಕಿದೆ. ನಾನಾ ಸವಾಲುಗಳು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯ ನಡುವೆಯೂ ಶಿಕ್ಷಕರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿಭಾಯಿಸುತ್ತಿರುವುದು ಪ್ರಶಂಶನೀಯ ಕಾರ್ಯವಾಗಿದೆ ಎಂದರು.

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಸಾವಿರಾರು ಕೋಟಿ ರೂ.ಗಳನ್ನು ಪ್ರತಿವರ್ಷನೀಡುತ್ತದೆ. ಈ ಅನುದಾನ ಬಳಸಿಕೊಂಡು ಕಲ್ಯಾಣ ಕರ್ನಾಟಕ ಭಾಗದ ಶಿಕ್ಷಣ ಮತ್ತು ಆರೋಗ್ಯದ ಅಭಿವೃದ್ಧಿ ಹಾಗೂ ಶಿಕ್ಷಕರ ಕೊರತೆಗಳನ್ನು ನೀಗಿಸಲು, ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿನ ಕೆಲ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯಗಳು ಸೇರಿದಂತೆ ನಾನಾ ಮೂಲಭೂತ ಸೌಕರ್ಯದ ಕೊರತೆ ಇರುವುದರ ಬಗ್ಗೆ ಇತ್ತೀಚೆಗೆ ನಡೆದ ಕ್ಯಾಬಿನೆಟ್ ಸಭೆಯಲ್ಲಿ ಚರ್ಚೆಯಾಗಿದೆ. ಈ ಸಮಸ್ಯೆ ಬಗೆಹರಿಸಲು ರಾಜ್ಯದ (2ನೇಪುಟಕ್ಕೆ)




## ವಿದ್ಯಾರ್ಥಿಗಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ : ಸಂಜೀವ್ ಕುಮಾರ್

**ಯುವ ಮಾರ್ಗ ಸುದ್ದಿ**



**ಲಿಂಗಸುಗೂರು,ಸೆ.6–** ಶಿಕ್ಷಣ ಎನ್ನುವುದು ಬದುಕು ಕಟ್ಟಿಕೊಳ್ಳುವ ಮಾರ್ಗವಾದರೆ, ಮಾನವೀಯ ಮೌಲ್ಯಗಳು ಸಮಾಜದ ಸಾಮರಸ್ಯಕ್ಕೆ ಬುನಾದಿಯಾಗಿವೆ. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ನಾಗರಿಕರಾಗಿ ಎಂದು ಶ್ರೀಉಟಕನೂರು ಬಸವಲಿಂಗ ತಾತ ಶಿಕ್ಷಣ ಟ್ರಸ್ಟ್‌ನ ಅದ್ಯಕ್ಷ ಸಂಜೀವಕುಮಾರ ಕಂದಗಲ್ ಕರೆ ನೀಡಿದರು.

ಪಟ್ಟಣದ ಹೊರವಲಯದಲ್ಲಿರುವ ಸಂಜೀವ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಹಾಗೂ ಪ್ರಥಮ ವರ್ಷದ ಡಿಪ್ಲೋಮಾ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನ ಎನ್ನುವುದು ಸುವರ್ಣಾಕ್ಷರದಲ್ಲಿ ಬರೆದಿಡುವ ಜೀವನ. ಇಲ್ಲಿ ಬದುಕು ರೂಪಿಸಿಕೊಳ್ಳಲು ಸಾಕಷ್ಟು ಅವಕಾಶಗಳಿರುತ್ತವೆ. ನಿಮ್ಮ ಭವಿಷ್ಯ ರೂಪಿಸಿಕೊಳ್ಳಲು ಪರಿಶ್ರಮಪಟ್ಟು ಆಸಕ್ತಿಯಿಂದ ಕಲಿಕೆ ಮಾಡಿ, ದೇಶಕಟ್ಟುವ ಉತ್ತಮ ನಾಗರಿಕರಾಗಿ ಹೊರಹೊಮ್ಮಿ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಈ ವೇಳೆ ತಾಲೂಕಿನ ಮುಖ್ಯ ಗುರುಗಳೆ ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಶಿವಣ್ಣ ವಕೀಲರು, ಡಿಪ್ಲೊಮಾ ಪ್ರಾಚಾರ್ಯ ಜಾವೇದ್ ಹುಸೇನ್, ಕಾನೂನು ಮಹಾವಿದ್ಯಾಲಯ ಪ್ರಾಚಾರ್ಯ ಅಮರೇಶ ಗೌಡೂರು, ಶಿವಣ್ಣ, ಉಪನ್ಯಾಸಕರಾದ ವೆಂಕಟೇಶ ಕವಿತಾಳ, ಚನ್ನಬಸವ, ಶಂಬುಲಿಂಗಪ್ಪ, ವೆಂಕಟೇಶ ಪೂಜಾರಿ, ಆಶೀಫ್, ಶಬ್ಬೀರ್ ಸಾಬ, ಶಿವರಾಜ ಸೇರಿ ಕಾನೂನು ವಿದ್ಯಾರ್ಥಿಗಳು, ಡಿಪ್ಲೊಮಾ, ಬಿ.ಇಡಿ, ಪದವಿ ವಿದ್ಯಾರ್ಥಿಗಳು ಸೇರಿದಂತೆ ಇದ್ದರು.

## ಟಿಪ್ಪು ಸುಲ್ತಾನ್ ವೃತ್ತದಲ್ಲಿ ಮುಸ್ಲಿಂ ಯುವಕರಿಂದ ಬೃಹತ್ ರಕ್ತದಾನ ಶಿಬಿರ

**ಯುವ ಮಾರ್ಗ ಸುದ್ದಿ**



**ಮಾನ್ವಿ,ಸೆ.6–** ಪ್ರವಾದಿ ಮಹಮ್ಮದ್ ಮುಸ್ತಫಾ ಅವರ 1500ನೇ ಜನ್ಮದಿನದ ಅಂಗವಾಗಿ, ಮಾನ್ವಿ ಮುಸ್ಲಿಂ ನೌ ಜವಾನ್ ಕಮಿಟಿ ವತಿಯಿಂದ ಪಟ್ಟಣದ ಟಿಪ್ಪು ಸುಲ್ತಾನ್ ವೃತ್ತದಲ್ಲಿ ಬೃಹತ್ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಾನ್ವಿ ಪಟ್ಟಣ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಅನೇಕ ಯುವಕರು ಉತ್ಸಾಹದಿಂದ ಭಾಗವಹಿಸಿ ರಕ್ತದಾನ ಮಾಡಿದರು.

ನೂರಕ್ಕೂ ಹೆಚ್ಚು ದಾನಿಗಳು ರಕ್ತ ನೀಡುವ ಮೂಲಕ 'ರಕ್ತದಾನ ಶ್ರೇಷ್ಠ ದಾನ' ಎಂಬುದನ್ನು ಸಾಬೀತುಪಡಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು. ನಂತರ, ಟಿಪ್ಪು ಸುಲ್ತಾನ್ ವೃತ್ತದಿಂದ ಭವ್ಯವಾದ ಮೆರವಣಿಗೆಯನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಮೌಲಾನ ಮುಜಾಹಿದುಲ್ ಇಸ್ಲಾಂ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಮಾನ್ವಿ ತಾಲೂಕು ವೈದ್ಯಾಧಿಕಾರಿ ಶರಣಬಸವ ಮುಷ್ಟೂರ್, ಪುರಸಭೆ ಮಾಜಿ ಸದಸ್ಯರಾದ ಸಾಧಿಕ್ ಹುಸೇನ್ ಖುರೇಶಿ, ಸಂಗಯ್ಯ ತಾತ, ಹಾಗೂ ಕಾಂಗ್ರೆಸ್ ಮುಖಂಡರಾದ ಮಿರ್ಜಾ ಆದಮ್ ಬೇಗ್, ಡಾ. ಆಸಿಫ್, ಯುವ ಮುಖಂಡರಾದ ಮೊಹಮ್ಮದ್ ರೆಹಮತ್ ಅಲಿ, ಮೊಹಮ್ಮದ್ ಆಶಿಮ್ ಖುರೇಷಿ, ಮೌಲಾನ ಮುಸ್ತಫ, ಜಾವಿದ್ ಖಾನ್, ಸೈಯದ್ ಏಕೆ ಜಾಗಿರ್ದಾರ್ ಸಾಹೇಬ್, ಸೈಯದ್ ಏಜಾಜ ಖಾದ್ರಿ, ಮೆಹಬೂಬ್ ಖುರೇಶಿ, ನಾಸಿರ್ ಖುರೇಷಿ, ಮುಸ್ತಫ ಕಪಗಲ್, ಹಫೀಜ್ ಸಂಶೀರ್, ಮುಸ್ತಫಾ ಖುರೇಷಿ, ಕೆ ಸಮೀರ್ ಪಾಷಾ, ಹಬೀಬ್, ಮೌಲಾನ ಮುಜಾಯಿದ ಖುರೇಶಿ, ಮೆಹಬೂಬ್ ಮದ್ಲಾಪುರ್, ಸಮೀರ್ ನಾಯ್ಕ್, ಅಬ್ರರ್ ಖುರೇಷಿ, ಹುಸೇನ್ ಬಾಷಾ, ಮಾಡಿಗೇರಿ ಇಸ್ಮಾಯಿಲ್, ನಬೀ ಚಾಂದ್, ಚಂದಾ ಆಲಂ ಬಾಷಾ, ಬಿಲಾಲ್, ಮುಜೀಬ್ ಅಹಮದ್ ಸೇರಿದಂತೆ ಮುಸ್ಲಿಂ ಸಮಾಜದ ಅನೇಕ ಯುವಕರು ಪಾಲ್ಗೊಂಡಿದ್ದರು.

## ಸ್ಪರ್ಧಾತ್ಮಕ ಪರೀಕ್ಷಾ ಕಾರ್ಯಾಗಾರ ಕನಸುಗಾರರ ವೇದಿಕೆ ಎಚ್.ಟಿ. ನಾಯಕ

**ಯುವ ಮಾರ್ಗ ಸುದ್ದಿ**



**ಮಾನ್ವಿ,ಸೆ.6–** ಯಾವ ಪರೀಕ್ಷೆಗೆ ಯಾವ ಅರ್ಹತೆ ಇರಬೇಕು, ಏನನ್ನು ಓದಬೇಕು, ಎಷ್ಟು ಓದಬೇಕು ಹೇಗೆ ಓದಬೇಕು ಎಂದು ಅಭಿಪ್ರೇರಣೆ ಯೋಂದಿಗೆ ಓದುವ ಕ್ರಮ ಶಿಸ್ತು ಸಮಯಪಾಲನೆ ಪಾಲಿಸುತ್ತಾ ದಿನಂಪ್ರತಿ ವ್ಯವಸ್ಥಿತವಾಗಿ ಅಧ್ಯಯನ ಮಾಡುವ ಬಗ್ಗೆ ಸವಿಸ್ತಾರವಾಗಿ ತರಬೇತಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯ ತರಬೇತಿದಾರ ಮತ್ತು ಪೋಲಿಸ್ ಎಚ್ ಟಿ ನಾಯಕ ಹೇಳಿದರು.

ಪಟ್ಟಣದ ಶ್ರೀವೆಂಕಟೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಮತ್ತು ಅಭಿಪ್ರೇರಣೆ ಕಾರ್ಯಗಾರ ಹಮ್ಮಿಕೊಳ್ಳಲಾಯಿತು.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿಯ ತರಬೇತಿದಾರ ಆಂಜನೇಯ ನಾಯಕ ಹಿರೇಕೋಟ್ನೆಕಲ್ ಅವರು ಮಾತನಾಡುತ್ತಾ "ಜೀವನ ಸುಗಮ ಅಲ್ಲ ಇಂದು ಕಷ್ಟ ಪಟ್ಟರೆ ಮುಂದಿನ ಬದುಕು ಸುಖಮುಯವಾಗುತ್ತದೆ. ಇಂದು ಕಷ್ಟವನ್ನು ಇಷ್ಟ ಪಟ್ಟು ಪ್ರಶ್ನಾತಿತ ಬದುಕನ್ನು ಸವಾಲಾಗಿ ಸ್ವೀಕರಿಸಿ ಓದು, ಓದು ಮತ್ತೇ ಓದು ಎಂಬ ಮಂತ್ರವನ್ನು ಜಪಿಸಿ ಸರ್ಕಾರಿ ಹುದ್ಧೆಯನ್ನು ಪಡೆಯಿರಿ."

ಕಾರ್ಯಾಗಾರದಲ್ಲಿ ಪ್ರಾಂಶುಪಾಲರಾದ ಶಂಕರಪ್ಪ ಅಂಗಡಿ, ಉಪನ್ಯಾಸಕರಾದ ಆಂಜನೇಯ ನಸಲಾಪುರ, ಡಾ. ಹುಲಿಯಪ್ಪ, ಚಂದ್ರುಶೇಖರ.ಎಚ್, ಮಹಿಬೂಬ್ ಮದ್ಲಾಪುರ, ಅಂಬಣ್ಣ ನಾಯಕ, ಆಫ್ರೀನ್, ಆಫೀಯಾ ಶೈಲಜಾ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಫೈಲೇರಿಯಾ ರೋಗದ ಪ್ರಸರಣಾ ಮೌಲ್ಯಮಾಪನ ಸಮೀಕ್ಷೆಗೆ ಸಹಕರಿಸಿ: ಸುರೇಶ ವರ್ಮಾ

**ಯುವ ಮಾರ್ಗ ಸುದ್ದಿ**



**ರಾಯಚೂರು,ಸೆ.6–**ಆರೋಗ್ಯ ಇಲಾಖೆಯ ವಿಬಿಡಿಸಿ ಕಾರ್ಯಕ್ರಮದ ಫೈಲೇರಿಯಾ ರೋಗದ ಪ್ರಸರಣಾ ಮೌಲ್ಯಮಾಪನಾ ಸಮೀಕ್ಷೆಗೆ ತಾಲೂಕಿನ ಎಲ್ಲ ಸರ್ಕಾರಿ, ಖಾಸಗಿ ಹಾಗೂ ಅನುದಾನಿತ ಶಾಲೆಗಳು ಸಹಕಾರಿಸಬೇಕೆಂದು ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸೆಪ್ಟೆಂಬರ್ 6ರ ಶನಿವಾರ ದಂದು ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ವಿಬಿಡಿಸಿ ಕಾರ್ಯಕ್ರಮದ ಫೈಲೇರಿಯಾ ರೋಗದ ಪ್ರಸರಣಾ ಮೌಲ್ಯಮಾಪನಾ ಸಮೀಕ್ಷೆಯ ತಾಲೂಕು ಮಟ್ಟದ ಟಾಸ್ಕಪೋರ್ಸ್ ಸಮಿತಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲೂಕಿನ ಒಟ್ಟು 37 ಸರ್ಕಾರಿ, ಖಾಸಗಿ ಹಾಗೂ ಅನುದಾನಿತ ಶಾಲೆಗಳು ಹಾಗೂ ಹೆಚ್ಚುವರಿಯಾಗಿ ಆಯ್ಕೆಯಾದ 15 ಶಾಲೆಗಳಲ್ಲಿನ ಒಂದು ಹಾಗೂ ಎರಡನೇ ತರಗತಿಯ ವಿಧ್ಯಾರ್ಥಿಗಳಿಗೆ ಇಎಲ್‌ಎಫ್ ರೋಗದ ಪ್ರಸರಣಾ ಮೌಲ್ಯಮಾಪನಾ ಸಮೀಕ್ಷೆ ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಶಾಲಾ ಮುಖ್ಯಗುರುಗಳು ಹಾಗೂ ಶಾಲಾ ವ್ಯವಸ್ಥಾಪಕರು ಇಎಲ್‌ಎಫ್ ರೋಗದ ಪ್ರಸರಣಾ ಮೌಲ್ಯಮಾಪನಾ ಸಮೀಕ್ಷೆ ಕೈಗೊಂಡು ಆರೋಗ್ಯ ಇಲಾಖೆಗೆ ಸಹಕಾರ ನೀಡುವಂತೆ ಸೂಚಿಸಿದರು.

ತಾಲೂಕಿನ ಯಾವುದೇ ಸರ್ಕಾರಿ, ಖಾಸಗಿ ಹಾಗೂ ಅನುದಾನಿತ ಶಾಲೆಗಳು ನಿರಾಕರಿಸಿದಲ್ಲಿ ಅಂತಹ ಶಾಲೆಯ ನೋಂದಣಿಯನ್ನು ರದ್ದುಪಡಿಸುವುದಾಗಿ ಸಭೆಯಲ್ಲಿ ಎಚ್ಚರಿಸಿದರು.

ಸೆಪ್ಟಂಬರ್–2025ರ ಮಾಹೆಯಲ್ಲಿ ಪರೀಕ್ಷೆ ಮುಗಿದು ದಸರಾ ರಜೆಗೆ ಮಕ್ಕಳು ತೆರಳುವ ಮುಂಚಿತವಾಗಿಯೆ ಈ ಇಎಲ್ ಎಫ್ ರೋಗದ ಪ್ರಸರಣಾ ಮೌಲ್ಯಮಾಪನ ಸಮೀಕ್ಷೆಯನ್ನು ಎಫ್‌ಟಿಎಸ್ ಕೀಟ್ಸ್ ಮೂಲಕ ಪರೀಕ್ಷಾ ಕಾರ್ಯಪೂರ್ಣಗೊಳಿಸಲು ಆರೋಗ್ಯ ಇಲಾಖೆಯು ಕ್ರಿಯಾ ಯೋಜನೆಯನ್ನು ತಯಾರಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣ ಅಧಿಕಾರಿಗಳ ಕಾರ್ಯಾಲಯದ ಕಚೇರಿ ಅಧೀಕ್ಷಕರು, ತಾಲೂಕು ಆರೋಗ್ಯಾಧಿಕಾರಿಗಳು, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿಗಳು ಮತ್ತು ತಾಲೂಕಾ ವಿಬಿಡಿ ಮೇಲ್ವಿಚಾರಕರು ಇದ್ದರು.

ಯುವ ಮಾರ್ಗ

ಭಾನುವಾರ : 07-09-2025

# ಮೊದಲನೇಯ ಪುಟದಿಂದ

## ತುಂಗಭದ್ರಾ ನದಿಯ ಗೇಟ್ ಅಳವಡಿಕೆ ವಿಳಂಬ ಖಂಡಿಸಿ ಸೆ.8ರಂದು ಮುನಿರಾಬಾದ್ ನೀರಾವರಿ ಕಚೇರಿ ಮುಂದೆ ರೈತರಿಂದ ಪ್ರತಿಭಟನೆ

ದುರಸ್ತಿಗೆ ಸರ ಕಾರ ಮುಂದಾಗಬೇಕು,ಡಿಸಿಎಂ ಹಾಗೂ ನೀರಾವರಿ ಸಚಿವರಾದ ಡಿ.ಕೆ.ಶಿವಕುಮಾರ್ ಅವರು ತುಂಗಭದ್ರಾ ಡ್ಯಾಂಗೆ ಬರಬೇಕು ಎಂದು ಒತ್ತಾಯಿಸಿದರು.ಈ ಸಂದರ್ಭದಲ್ಲಿ ಜಿ.ಲೋಕರಡ್ಡಿ, ಮಲ್ಲಿಕಾರ್ಜುನ ಜಕ್ಕಲದಿನ್ನಿ, ತಾ.ಪಂ.ಮಾಜಿ ಸದಸ್ಯ ವೀರನಗೌಡ ಹಣಗಿ, ಅಮರೇಶ ಚಾಗಭಾವಿ, ಜೆ.ದೇವರಾಜಗೌಡ, ಎಂ.ನಾಗರಾಜಗೌಡ, ಬಸವರಾಜ ನಾಯಕ ಕಲ್ಲೂರು, ಎಂ.ಶ್ರೀನಿವಾಸ ಜಾಲಾಪುರ, ಚನ್ನಪ್ಪ ಚನ್ನೂರು, ಎಂ.ಪ್ರಕಾಶ, ರಮೇಶ ಚಿಂಚರಕಿ, ಉದಯಕುಮಾರ್ ಚಾಗಭಾವಿ, ಶರಣಗೌಡ ಶಾಖಾಪುರ, ಬಸ್ಸಪ್ಪಗೌಡ ನಂದರಡ್ಡಿ, ಮೌಲಸಾಬ್ ಗಣ್ಣದಿನ್ನಿ, ಅಮರೇಶ ಸಾಹುಕಾರ್ ಚಾಗಭಾವಿ, ಚಂದ್ರಶೇಖರ, ವಿಜಯಕುಮಾರ, ನಿಂಬಯ್ಯಸ್ವಾಮಿ ಸೇರಿದಂತೆ ಅನೇಕರು ಇದ್ದರು.

## ಶಿಕ್ಷಕ ಸಮೂಹದ ಶ್ರಮ ಶ್ಲಾಘನೀಯ: ಎನ್.ಎಸ್.ಬೋಸರಾಜು

ಮುಖ್ಯಮಂತ್ರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದರು. ಈ ಭಾಗದಲ್ಲಿ ಶಿಕ್ಷಕರ ನೇಮಕಾತಿ, ಮುಂಬಡ್ತಿ, ವೇತನ ಸೇರಿದಂತೆ ಶಿಕ್ಷಕರ ಮತ್ತು ಸಾರ್ವಜನಿಕರ ಬೇಡಿಕೆಗಳಿಗೆ ರಾಜ್ಯ ಸರ್ಕಾರವು ಹಂತ-ಹಂತವಾಗಿ ಸ್ಪಂದಿಸುತ್ತಿದೆ ಎಂದು ತಿಳಿಸಿದರು.

ಈ ವೇಳೆ ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್. ಪಾಟೀಲ್ ಅವರು ಮಾತನಾಡಿ, ಶಿಕ್ಷಕರು ಕಣ್ಣಿಗೆ ಕಾಣುವ ದೇವರಿದ್ದಂತೆ ಎಂದು ಅವರ ಕಾರ್ಯಸಾಧನೆಯನ್ನು ಬಣ್ಣಿಸಿದರು.

ಶಿಕ್ಷಕರು ದಿನ ನಿತ್ಯ ಒಂದಿಲ್ಲೊಂದು ಕಾರ್ಯದೊತ್ತಡದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಕಾರ್ಯಭಾರದ ಹೊರೆಯನ್ನು ಕಡಿಮೆ ಮಾಡಬೇಕು. ಅಂದಾಗ ಮಾತ್ರ ಶಿಕ್ಷಕರಿಂದ ಗುಣಮಟ್ಟದ ಕಲಿಕೆಯನ್ನು ನಿರೀಕ್ಷೆ ಮಾಡಬಹುದಾಗಿದೆ ಎಂದು ತಿಳಿಸಿದರು. ಜಿಲ್ಲೆಯಲ್ಲಿ ಗುರುಭವನ ನಿರ್ಮಾಣಕ್ಕಾಗಿ ಈಗಾಗಲೇ ಅನುದಾನ ಮೀಸಲಿರಿಸಲಾಗಿದೆ. ಜಾಗದ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ತಿಳಿಸಿದರು.

ಸಾಹಿತಿ ರಮೇಶಬಾಬು ಯಾಳಗಿ ಅವರು ಉಪನ್ಯಾಸ ನೀಡಿ, ಗುರು ಇಲ್ಲದೆ ಗುರಿ ತಲುಪುವುದು ಬಹಳ ಕಷ್ಟ. ಭರವಸೆಯನ್ನು ಹೆಚ್ಚಿಸುವ, ಕನಸನ್ನು ಸಾಕಾರಗೊಳಿಸುವ, ಕಲಿಕಾ ಶಕ್ತಿಯನ್ನು ಹೆಚ್ಚಿಸುವ ಸೂತ್ರಧಾರನೇ ಉತ್ತಮ ಶಿಕ್ಷಕ. ದೇಶದ ಪ್ರಗತಿಯಲ್ಲಿ ಶಿಕ್ಷಣಕ್ಕೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ಶಿಕ್ಷಕರಿಗೂ ಇದೆ. ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಶಿಕ್ಷಕರು ಸರಿಯಾಗಿ ಅರಿತು ಬೋಧನೆ ಇತರೆ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆಯ ಕಾರ್ಯರೂಪಕ್ಕೆ ತರುವಲ್ಲಿ ಪ್ರಯತ್ನಿಸಬೇಕು ಎಂದರು.

ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ: ಶಾಲಾ ಶಿಕ್ಷಣ ಇಲಾಖೆಯಿಂದ 2025-26ನೇ ಸಾಲಿನ ರಾಯಚೂರು ಜಿಲ್ಲಾ ಹಾಗೂ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಇದೆ ವೇಳೆ ವಿವಿಧ ಶಾಲೆಗಳ ಶಿಕ್ಷಕರಿಗೆ ಪ್ರದಾನ ಮಾಡಲಾಯಿತು.

ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಶಾಲಾ ಶಿಕ್ಷಣ ಇಲಾಖೆಯ ಆಡಳಿತ ವಿಭಾಗದ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಮತ್ತು ಸಹಕಾರ ಸಂಘದ ಅಧ್ಯಕ್ಷರಾದ ಜಯಂತರಾವ್ ಪತಂಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವ ವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಚನ್ನಬಸವ, ಮುಖಂಡರಾದ ಶಿವಮೂರ್ತಿ, ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿ ಈರಣ್ಣ ಕೊಸಗಿ ಸೇರಿದಂತೆ ವಿವಿಧ ಶಾಲೆಗಳ ಮುಖ್ಯಗುರುಗಳು, ಶಿಕ್ಷಕರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಇದ್ದರು.

## ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆಯೇ ಮುಖ್ಯ ಗುರಿ




**ಬೀದರ್,ಸೆ.6–** ಲಿಂಗಾಯತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುವುದೇ ನಮ್ಮ ಮುಂದಿನ ಮುಖ್ಯ ಗುರಿ ಎಂದು ಇತ್ತೀಚೀಗೆ ನಗರದ ಬಿ.ವಿ. ಭೂಮರಡ್ಡಿ ಕಾಲೇಜು ಮೈದಾನದಲ್ಲಿ ಕಿಕ್ಕಿರಿದು ಸೇರಿದ ಜನಸ್ತೋಮದ ನಡುವೆ ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಸ್ವಾಮೀಜಿಗಳು ಘೋಷಿಸಿದರು.

ಲಿಂಗಾಯತ ಮಠಾಧಿಪತಿಗಳ ಒಕ್ಕೂಟ, ಬಸವ ಸಂಸ್ಕೃತಿ ಅಭಿಯಾನದ ಸಮಿತಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಬಸವ ಸಂಸ್ಕೃತಿ ಅಭಿಯಾನಕ್ಕೆ ಜಿಲ್ಲೆ ಸೇರಿದಂತೆ ನೆರೆಯ ಜಿಲ್ಲೆಯ ಅಪಾರ ಸಂಖ್ಯೆಯ ಶರಣ-ಶರಣೆಯರು ಆಗಮಿಸಿದ್ದರು. 237 ಮೇಣದ ಬತ್ತಿಗಳಿಂದ ಕೂಡಿದ ಬಸವ ಸಂಸ್ಕೃತಿ ಎಂದು ಕನ್ನಡದಲ್ಲಿ ಬರೆದಿದ್ದ ಅಕ್ಷರಗಳನ್ನು ಬೆಳಗಿಸಿ ಒಕ್ಕೂಟದ ಸ್ವಾಮೀಜಿಗಳು ಕಾರ್ಯಕ್ರಮ ಉದ್ಘಾಟಿಸಿದರು. 'ಬಸವ ಸಂಸ್ಕೃತಿಯ ಪ್ರಕಾರವೇ ಬದುಕುತ್ತೇವೆ' ಎಂಬ ಸಂಕಲ್ಪ ಮಾಡಿದರು.

ಅಭಿಯಾನ ಸಮಿತಿ ಅಧ್ಯಕ್ಷ ಬಸವರಾಜ ಧನ್ನೂರ ಮಾತನಾಡಿ, ವಿಶ್ವಗುರು ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರಾಗಿ ಘೋಷಿಸಬೇಕೆಂಬ ಹತ್ತಾರು ವರ್ಷಗಳ ಬೇಡಿಕೆ ಈಡೇರಿದೆ. ಅದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ. ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕೊಡಬೇಕು. ಮಹಾತ್ಮ ಗಾಂಧೀಜಿ, ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಯಾವ ರೀತಿ ರಾಷ್ಟ್ರಮಟ್ಟದಲ್ಲಿ ಆಚರಿಸಲಾಗುತ್ತದೋ ಅದೇ ರೀತಿ ಬಸವಣ್ಣನವರ ಜಯಂತಿ ಕೂಡ ಆಚರಿಸಬೇಕು ಎಂದು ಹಕ್ಕೊತ್ತಾಯ ಮಾಡಿದರು.

ಬಳಿಕ ಮಾತನಾಡಿದ ಅಥಣಿ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ, ಬೀದರ್ ಜಿಲ್ಲೆಯಲ್ಲಿ ಅಪಾರ ಸಂಖ್ಯೆಯಲ್ಲಿ ಸೇರುವ ಮೂಲಕ ಲಿಂಗಾಯತರ ಶಕ್ತಿ ಏನೆಂಬುದನ್ನು ತೋರಿಸಿದ್ದೀರಿ. ಇದೇ ಉತ್ಸಾಹ, ಹುಮ್ಮಸ್ಸಿನಿಂದ ಅಕ್ಟೋಬರ್ 5ರಂದು ಬೆಂಗಳೂರಿನಲ್ಲಿ ನಡೆಯಲಿರುವ ಸಮಾರೋಪ ಸಮಾರಂಭದಲ್ಲೂ ಭಾಗವಹಿಸಬೇಕು. ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಸಿಗಬೇಕೆಂಬ ನಮ್ಮ ಗುರಿ, ಕೂಗು ರಾಜ್ಯ, ರಾಷ್ಟ್ರಮಟ್ಟಕ್ಕೆ ಕೇಳಿಸಬೇಕು ಎಂದು ಹೇಳಿದರು.

ಸಾಣೇಹಳ್ಳಿ ತರಳಬಾಳು ಸಂಸ್ಥಾನ ಶಾಖಾ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಬೆಂಗಳೂರಿನಲ್ಲಿ ನಡೆಯಲಿರುವ ಸಮಾರೋಪದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ, ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಮಾನ್ಯತೆ ಕೊಡಬೇಕೆಂಬ ಹಕ್ಕೊತ್ತಾಯ ಮಾಡೋಣ ಎಂದರು. ಇದಕ್ಕೆ ಇತರೆ ಸ್ವಾಮೀಜಿಗಳು ದನಿಗೂಡಿಸಿ, ಒಗ್ಗಟ್ಟು ಪ್ರದರ್ಶಿಸಿದರು.

ಬೆಳಗಾವಿ ಹಾರುಗೇರಿಯ ಸಾಹಿತಿ ವಿ.ಎಸ್. ಮಾಳಿ ಅವರು 'ಅನುಭವ ಮಂಟಪ ಮಹಾಮನೆ' ಕುರಿತು ಮಾತನಾಡಿ, ಬಸವಣ್ಣನವರು ಬಿಜ್ಜಳ ಅರಸನ ಅರಮನೆಗೆ ಪರ್ಯಾಯವಾಗಿ ಅನುಭವ ಮಂಟಪ ಎಂಬ ಮಹಾಮನೆ ಕಟ್ಟಿದರು. ಅದು ಭೌತಿಕ ಕಟ್ಟಡವಾಗಿರಲಿಲ್ಲ. ಚಿಂತನ-ಮಂಥನದ ಕೇಂದ್ರವಾಗಿತ್ತು. ಅಲ್ಲಿ ಎಲ್ಲರೂ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತಿದ್ದರು. ನಿರಂಕುಶ ಆಡಳಿತದಲ್ಲಿ ಅರಸ ಕೈಗೊಳ್ಳುವಂತೆ ನಿರ್ಧಾರ ಕೈಗೊಳ್ಳುತ್ತಿರಲಿಲ್ಲ ಎಂದರು.

ಬಿಜ್ಜಳ ಸಾಮ್ರಾಜ್ಯ ವಿಸ್ತರಣೆಗೆ ಸೈನ್ಯ ಕಟ್ಟಿದರೆ, ಬಸವಣ್ಣ ಕಾಯಕ ಜೀವಿಗಳ ಸಂಘ ಕಟ್ಟಿದರು. ದೇವಾಲಯಕ್ಕೆ ಪರ್ಯಾಯವಾಗಿ ದೇಹವೇ ದೇಗುಲ ಎಂಬ ಅರಿವು ಮೂಡಿಸಿದರು. ವಿಶ್ವಮಾನ್ಯ ತತ್ವಗಳನ್ನು ಕೊಟ್ಟಿರುವ ಬಸವಣ್ಣನವರ ಸಂದೇಶಗಳು ಸದಾ ಪ್ರಸ್ತುತ ಎಂದು ಹೇಳಿದರು.

ಕೂಡಲಸಂಗಮ ಬಸವಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ, ಬೆಳಗಾವಿ ನಾಗನೂರು ರುದ್ರಾಕ್ಷಿ ಮಠದ ಅಲ್ಲಮಪ್ರಭು ಸ್ವಾಮೀಜಿ, ಬೆಂಗಳೂರಿನ ಚನ್ನಬಸವಾನಂದ ಸ್ವಾಮೀಜಿ, ಪೌರಾಡಳಿತ ಸಚಿವ ರಹೀಂ ಖಾನ್, ವಿಧಾನ ಪರಿಷತ್ ಸದಸ್ಯ ಶಶೀಲ್ ಬಿ. ನಮೋಶಿ, ಪ್ರಮುಖರಾದ ಬಸವರಾಜ ಬುಳ್ಳಾ, ಬಾಬುವಾಲಿ, ಡಾ. ರಜನೀಶ ವಾಲಿ ಇದ್ದರು. ಸುವರ್ಣಾ ಧನ್ನೂರ ಅವರು ಬಸವ ಗುರುಪೂಜೆ ಮಾಡಿದರು. ಭಾಲ್ಕಿ ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಸುರೇಶಕುಮಾರ ಪಾಟೀಲ, ನವಲಿಂಗ ಪಾಟೀಲ ನಿರೂಪಿಸಿದರೆ, ರಾಜೇಂದ್ರ ಜೊನ್ನಿಕೇರಿ ವಂದಿಸಿದರು.

## ರಾಜೀವ ಗಾಂಧಿ ರಾಜ್ಯ ಮಟ್ಟದ ಶ್ರೇಷ್ಠ ಶಿಕ್ಷಕ ಪ್ರಶಸ್ತಿಗೆ ಪಿ.ಪ್ರವೀಣಕುಮಾರ್ ಆಯ್ಕೆ ; ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ

ಯುವ ಮಾರ್ಗ ಸುದ್ದಿ



**ಸಿರವಾರ, ಸೆ.5–**ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಶಿಕ್ಷಕರ ಘಟಕದ ವತಿಯಿಂದ ಪ್ರದಾನ ಮಾಡಲಾಗುವ ಮಾಜಿ ಪ್ರಧಾನಿ ರಾಜೀವ ಗಾಂಧಿ ರಾಜ್ಯ ಮಟ್ಟದ ಶ್ರೇಷ್ಠ ಶಿಕ್ಷಕ ಪ್ರಶಸ್ತಿಗೆ ಉಪನ್ಯಾಸಕ ಪಿ.ಪ್ರವೀಣಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಪಿ.ಪ್ರವೀಣಕುಮಾರ್ ಅವರು ಮೂಲತಃ ರಾಯಚೂರು ನಗರದ ನಿವಾಸಿಯಾಗಿದ್ದು. ಸಿರವಾರ ಪಟ್ಟಣದ ಶ್ರೀಅಮರೇಗೌಡ ಬಯ್ಯಾಪೂರು ಪದವಿ ಪೂರ್ವ ಕಾಲೇಜು ಹಾಗೂ ಪದವಿ ಮಹಾವಿದ್ಯಾಲಯದಲ್ಲಿ 2011 ರಿಂದ ಇಲ್ಲಿಯವರೆಗೂ ಸತತ 15 ವರ್ಷಗಳ ಸೇವೆಯನ್ನು ಸಲ್ಲಿಸುತ್ತಿದ್ದು. ಅವರು ರಾಜ್ಯಶಾಸ್ತ್ರ ವಿಷಯದ ಉಪನ್ಯಾಸಕರಾಗಿ ಉತ್ತಮ ಸೇವೆಯನ್ನು ಸಲ್ಲಿಸುತ್ತಾ ಬರುತ್ತಿದ್ದಾರೆ. ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿಯಾಗಿ ಸಹ ಸೇವೆಯನ್ನು ಸಲ್ಲಿಸುತ್ತಾ ಬರುತ್ತಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಿಗೆ ಶಿಸ್ತು, ನಿಷ್ಠೆ ಕಲಿಸುತ್ತಾ ಬರುತ್ತಿದ್ದಾರೆ. ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರೀತಿಯ ಉಪನ್ಯಾಸಕ ಎಂದರೆ ತಪ್ಪಾಗಲಾರದು.

ಅವರಿಗೆ ಮಾನ್ವಿ ಪಟ್ಟಣದಲ್ಲಿ 2019-20 ನೇ ಶೈಕ್ಷಣಿಕ ಸಾಲಿನ ವರ್ಷದಲ್ಲಿ ಶಿಕ್ಷಣ ಕ್ಷೇತ್ರದಿಂದ ತಾಲೂಕು ಮಟ್ಟದ ಶ್ರೇಷ್ಠ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ನಂತರ ಮಸ್ಕಿ ಪಟ್ಟಣದಲ್ಲಿ ರಾಯಚೂರು ಜಿಲ್ಲೆ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಉತ್ತಮ ಉಪನ್ಯಾಸಕ ಪ್ರಶಸ್ತಿಯನ್ನು ಮೂಡಿಗೇರಿಸಿ ಕೊಂಡರು. ಇನ್ನೂ ಆನೇಕ ಸಾಮಾಜಿಕ, ಸಮಾಜ ಸೇವೆ, ಹಾಗೂ ಸಂಘ ಸಂಸ್ಥೆಗಳಿಂದ ಆನೇಕ ಪ್ರಶಸ್ತಿಗಳು ಮೂಡಿಗೇರಿಸಿಕೊಂಡಿ ದ್ದಾರೆ.

ಬೆಂಗಳೂರಿನ ಭಾರತ ಜೋಡೋ ಭವನ" ಕ್ಲೀನ್ಸ್ ರಸ್ತೆ ಬೆಂಗಳೂರು ನಡೆಯಲಿರುವ ಮಾಜಿ ಪ್ರಧಾನಿ ಶ್ರೀ ರಾಜೀವ್ ಗಾಂಧಿ ರಾಜ್ಯ ಮಟ್ಟದ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಪ್ರಶಸ್ತಿಗೆ ಶ್ರೀ ಅಮರೇಗೌಡ ಬಯ್ಯಾಪೂರು ಪದವಿ ಪೂರ್ವ ಕಾಲೇಜು ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದ ರಾಜ್ಯಶಾಸ್ತ್ರದ ಉಪನ್ಯಾಸಕರಾದ ಪಿ.ಪ್ರವೀಣ್ ಕುಮಾರ್ ಆಯ್ಕೆಯಾಗಿದ್ದು ಸಿರವಾರ ಪಟ್ಟಣದ ಹಾಗೂ ರಾಯಚೂರು ಜಿಲ್ಲೆಯ ಹೆಮ್ಮೆಯ ವಿಷಯವಾಗಿದೆ. ಅವರಿಗೆ ಇನ್ನೂ ಮುಂದೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿಗಳು ಸಿಗಲಿ ಎಂದು ಸಿರವಾರ ಪಟ್ಟಣದ, ಬಯ್ಯಾಪೂರು, ಕಾಲೇಜಿನ, ರಾಯಚೂರು ಜಿಲ್ಲೆಯ ಜನತೆಯ ಆಶಯವಾಗಿದೆ.

## ಜಿಲ್ಲಾಧಿಕಾರಿಗಳಿಂದ ಕಾಮಗಾರಿ ಪರಿಶೀಲನೆ



ಯುವ ಮಾರ್ಗ ಸುದ್ದಿ

**ರಾಯಚೂರು.ಸೆ.6–**ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸೆಪ್ಟೆಂಬರ್ 6ರಂದು ಬೆಳಗಿನ ಅವಧಿಯಲ್ಲಿ ರಾಯಚೂರು ಹೊರವಲಯದಲ್ಲಿ ಸಂಚರಿಸಿ ಚಿಕ್ಕಸೂಗುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಏಗನೂರ ಗ್ರಾಮದ ಬಳಿಯಲ್ಲಿ ನಿರ್ಮಾಣವಾಗುತ್ತಿರುವ ಜಿ+3 ಮಾದರಿಯ ವಸತಿ ಸಮುಚ್ಛಯದ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿದರು.

ಪ್ರಧಾನಮಂತ್ರಿ ಆವಾಸ್ ನಗರ ಯೋಜನೆಯ ಎಎಚ್‌ಪಿ ಉಪ ಘಟಕದಡಿ 2419 ಮನೆಗಳು 2021-22 ನೇ ಸಾಲಿನಲ್ಲಿನ ವಸತಿ ಸಮುಚ್ಛಯದ ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು ಖುದ್ದು ಪರಿಶೀಲಿಸಿದರು.

ಕೇಂದ್ರ ಸರ್ಕಾರದಿಂದ 1.50 ಲಕ್ಷ ಮತ್ತು ರಾಜ್ಯ ಸರ್ಕಾರದಿಂದ 2 ಲಕ್ಷ ಸಬ್ಸಿಡಿ ಸಹಾಯಧನದಡಿ ನಿರ್ಮಾಣವಾಗುತ್ತಿರುವ ಈ ವಸತಿ ಸಮುಚ್ಛಯದಲ್ಲಿ ಜನರಿಗೆ ಅನುಕೂಲವಾಗುವ ಹಾಗೆ ಮೂಲಭೂತ ಸೌಕರ್ಯ ಕಲ್ಪಿಸಲು ಒತ್ತು ಕೊಡಬೇಕು. ಜನ ಬಳಕೆಗೆ ಅನುಕೂಲವಾಗುವ ಹಾಗೆ ಕುಡಿಯುವ ನೀರಿನ ಪೈಪಲೈನ್ ಅಳವಡಿಕೆ, ವೈಜ್ಞಾನಿಕ ಮಾದರಿಯಲ್ಲಿ ಒಳಚರಂಡಿ ಹಾಗೂ ನಿರ್ಮಾಣಕ್ಕೆ ಒತ್ತು ಕೊಡಬೇಕು. ಕಾಮಗಾರಿ ಸ್ಥಳಕ್ಕೆ ನಿಯಮಿತವಾಗಿ ಭೇಟಿ ನೀಡಿ ಪರಿಶೀಲಿಸಬೇಕು. ಶಿಸ್ತುಬದ್ಧವಾದ ಮೇಲ್ವಿಚಾರಣೆ ಮಾಡಬೇಕು ಎಂದು ಅಧಿಕಾರಿಗಳು ಮತ್ತು ಗುತ್ತಿಗೆ ಪಡೆದ ಏಜೆನ್ಸಿ ಹಾಗೂ ಅಭಿಯಂತರರಿಗೆ

ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ನಗರದಲ್ಲಿ ವಾಸ ಮಾಡಿದ ಬಡವರಿಗೆ ಈ ಯೋಜನೆಯಿಂದ ಒಂದು ಸೂರು ಪಡೆದುಕೊಳ್ಳಲು ಅನುಕೂಲವಾಗಲಿದ್ದು, ಕಾಮಗಾರಿಯಲ್ಲಿ ಗುಣಮಟ್ಟದ ಕಾಯ್ದುಕೊಳ್ಳಬೇಕು. ಮಾರ್ಗಸೂಚಿಯಂತೆ ಗುಣಮಟ್ಟದ ಸಾಮಗ್ರಿ ಬಳಸಬೇಕು ಎಂದು ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಮೊದಲನೇ ಹಂತದಲ್ಲಿ ಒಟ್ಟು 1191 ಮನೆಗಳ ನಿರ್ಮಾಣ ಕಾರ್ಯ ಆರಂಭವಾಗಿದ್ದು ಈ ಪೈಕಿ ಬರುವ ದೀಪಾವಳಿ ವೇಳೆಗೆ 300 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ನೀಡುವುದಾಗಿ ಸಂಬಂಧಿಸಿದ ಗುತ್ತಿಗೆದಾರರು ಇದೆ ವೇಳೆ ಪ್ರತಿಕ್ರಿಯಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಈರಣ್ಣ ಬಿರಾದಾರ, ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷ ರಾಣಿ, ಡಿಯುಡಿಸಿಯ ಸಿಎಲ್‌ಟಿಸಿ ಹಂಪಮ್ಮ ಸೇರಿದಂತೆ ಇನ್ನಿತರರು ಇದ್ದರು.

## 10 ಲಕ್ಷ ಮೌಲ್ಯದ 22 ಬೈಕ್ ಕದ್ದಿದ್ದ ಕಳ್ಳನ ಬಂಧಿಸಿದ ಜಮಖಂಡಿ ಪೊಲೀಸರು

**ಜಮಖಂಡಿ,ಸೆ.6–** ತಾಲೂಕಿನ ಸುತ್ತಮುತ್ತಲಿನ ಕಳ್ಳತನ ವಾಗಿದ್ದ 22 ಬೈಕ್ ಗಳನ್ನ ಪತ್ತೆ ಮಾಡುವಲ್ಲಿ ಜಮಖಂಡಿ ಪೊಲೀಸರು ಯಶಸ್ವಿಯಾಗಿದ್ದಾರೆ.




ಜಮಖಂಡಿ ಶಹರ್ ಹಾಗೂ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನ ವಾಗಿದ್ದ ಅಂದಾಜು ಹತ್ತು ಲಕ್ಷ ಮೌಲ್ಯದ ವಿವಿಧ ಕಂಪನಿಗಳ 22 ಬೈಕಗಳನ್ನ ಪತ್ತೆ ಮಾಡಿದ್ದಾರೆ.ಇನ್ನು ಕಳ್ಳತನ ಮಾಡಿದ್ದ ಜಮಖಂಡಿ ತಾಲೂಕಿನ ಇನಾಂ ಹಂಚಿನಾಳ ಗ್ರಾಮದ ಕಳ್ಳ ಸಿದ್ದಪ್ಪ ಉಪ್ಪಲದಿನ್ನಿಯನ್ನ ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ.

ಕಳೆದ ಜೂನ್ 9.ರಂದು ಜಮಖಂಡಿ ನಗರದ ಕೋಷ್ಠಿ ಗಲ್ಲಿಯಲ್ಲಿ ಅಪ್ಪಾಸಾಹೇಬ್ ಬಿರಾದಾರ ಎನ್ನುವವರ ಬೈಕ್ ಕಳ್ಳತನ ವಾಗಿತ್ತು.ಅವರು ಈ ಕುರಿತು ಶಹರ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಪ್ರಕರಣದ ಬೆನ್ನತ್ತಿದ ಪೊಲೀಸರು ಜಮಖಂಡಿ ಶಹರ್ ಹಾಗೂ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳ್ಳತನವಾಗಿದ್ದ 22 ಬೈಕಗಳನ್ನ ಪತ್ತೆ ಮಾಡಿ ಆರೋಪಿಯನ್ನ ಬಂಧಿಸಿದ್ದಾರೆ.ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಹೆಚ್ಚುವರಿ ಜಿಲ್ಲಾ ವರಿಷ್ಠಾಧಿಕಾರಿ ಮಹಾಂತೇಶ್ವರ ಜಿದ್ದಿ ಡಿ.ವಾಯ್.ಎಸ್.ಪಿ ಸಯ್ಯದ ರೋಷನ್ ಜಮೀ ರ್,ಮಾರ್ಗ ದರ್ಶನದಲ್ಲಿ ಸಿಪಿಐ ಮಲ್ಲಪ್ಪ ಡಿ ಮಡ್ಡಿ,ನೇತೃತ್ವದಲ್ಲಿ ಪಿ.ಎಸ್.ಐ ಅನಿಲ್ ಕುಂಬಾರ.ಅಪರಾದ ವಿಭಾಗದ ಪಿ.ಎಸ್.ಐ ಎನ್. ಕೆ. ಕಾಜಗಾರ, ಪಿ.ಎಸ್.ಐ,ಸಿಬ್ಬಂದಿಗಳಾದ ಸಿದ್ದು ಕಲಾತೆ,ಮುತ್ತಪ್ಪ ಮಾಂಗ,ಪ್ರಕಾಶ ಹೊಸಮನಿ,ಸಂಗಪ್ಪ ಕೋಟಿ. ಪರಶುರಾಮ ಘಾಟಗೆ. ಮಲ್ಲಿಕಾರ್ಜುನ ತಂಬಾಕದ,ನಾಗರಾಜ ಬಿಸಲದಿನ್ನಿ,ಶಂಕರ ಆಸಂಗಿ, ಆಯ್.ಎಮ್. ಪೆಂಡಾರಿ, ರಾಜಶೇಖರ ಮನಗೂಳಿ ರವರನ್ನೊಳಗೊಂಡ ತಂಡ ರಚನೆ ಮಾಡಿ,ಕಾರ್ಯಾಚರಣೆ ಕೈಗೊಂಡು ಜಮಖಂಡಿ ಪೊಲೀಸರು ಕಾರ್ಯಾಚರಣೆ ನಡೆಸಿ ದ್ದರು.

# ಮಕ್ಕಳ ಬದುಕಿನಲ್ಲಿ ಪಾಲಕರ ಪಾತ್ರ

ನಮ್ಮ ಮಕ್ಕಳು ನಮ್ಮ ಜೀವನ ಸಂಗಾತಿಗಳಲ್ಲ. ಅವರಿಗೆ ಅವರದ್ದೇ ಆದ ಸ್ವಂತದ ಜೀವನವಿದ್ದು ತಮ್ಮ ಸಂಗಾತಿಗಳನ್ನು ಹೊಂದುತ್ತಾರೆ. ಪಾಲಕರಾಗಿ ನಾವು ಅರಿತುಕೊಳ್ಳಬೇಕಾದದ್ದು ಬಹಳವಿದೆ. ನಮ್ಮ ಮಕ್ಕಳ ಬದುಕಿನಲ್ಲಿ ನಮ್ಮ ಪಾತ್ರ ಬಹಳ ದೊಡ್ಡದು ಎಂದು ನಾವು ಅಂದುಕೊಳ್ಳುತ್ತೇವೆ ಆದರೆ ನಿಜವಾಗಿ ಪ್ರಾಥಮಿಕ ಹಂತದಲ್ಲಿ ಮಾತ್ರ ನಾವು ನಮ್ಮ ಮಕ್ಕಳ ಬದುಕಿನಲ್ಲಿ ಮುಖ್ಯವಾಗಿರುತ್ತೇವೆ. ಮಕ್ಕಳ ಬದುಕಿನಲ್ಲಿ ನಮ್ಮ ಪಾತ್ರ ಅವರ ಪಾಲನೆ ಪೋಷಣೆ ಮಾಡುವುದು ಮತ್ತು ನಮ್ಮ ಪ್ರಾಪಂಚಿಕ ಬದುಕಿನ ಕೌಶಲಗಳನ್ನು ಅವರಿಗೆ ಕಲಿಸಿಕೊಡಲು ಸಲಹೆಗಳನ್ನು ನೀಡಲು ಮಾತ್ರ, ಆದರೆ ನಾವು ಎಂದಿಗೂ ಅವರು ತಮ್ಮ ರೆಕ್ಕೆಯನ್ನು ಅಗಲಿಸಿ ಹಾರಿ ಹೋಗದೆ ಇರುವಂತೆ ಮಾಡಲು ಸಾಧ್ಯವಿಲ್ಲ.

ಮಕ್ಕಳು ಬೆಳೆದಂತೆ ನಾವು ಅವರಿಗೆ ಚಿಕ್ಕಂದಿನಲ್ಲಿ ನೀಡಿದ ಶೈಕ್ಷಣಿಕ ಮತ್ತು ಮೌಲ್ಯಯುತ ಬುನಾದಿಗಳು ಅವರಿಗೆ ಬದುಕಿನ ಹಾದಿಯಲ್ಲಿ ಶಕ್ತಿ ಸಾಮರ್ಥ್ಯಗಳನ್ನು ನೀಡಬೇಕೇ ಹೊರತು ಕಡಿವಾಣಗಳಾಗಬಾರದು. ಅವರು ತಮ್ಮದೇ ಆದ ಕನಸುಗಳನ್ನು, ಆಸೆ ಆಕಾಂಕ್ಷೆಗಳನ್ನು ಮತ್ತು ಸಂಬಂಧಗಳನ್ನು ತಮ್ಮ ಮುಂದಿನ ಬದುಕಿನಲ್ಲಿ ಹೊಂದಿರುತ್ತಾರೆ. ಪಾಲಕರಾಗಿ ನಮ್ಮ ಕೆಲಸ ಅವರಿಗೆ ನಾವು ನೀಡುವ ಅದ್ವಿತೀಯ ಬೆಂಬಲ ಮತ್ತು ಪ್ರೀತಿ ಮಾತ್ರ. ಅವರನ್ನು ನಾವು ನಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಪ್ರಯತ್ನವನ್ನು ಎಂದೂ ಮಾಡಬಾರದು.

*ಮಕ್ಕಳಿಗೆ ಯಾವುದೇ ರೀತಿಯ ತೊಂದರೆ ಆಗಬಾರದು ಎಂದು ಅವರಿಗೆ ರಕ್ಷಣಾ ಗೋಡೆಯಂತೆ ನಿಲ್ಲದೆ ಅವರು ತಮ್ಮದೇ ಆದ ರೀತಿಯಲ್ಲಿ ಬದುಕಿನ ಎಲ್ಲ ಏರಿಳಿತಗಳನ್ನು, ಸವಾಲುಗಳನ್ನು ಅನುಭವಿಸಲು ಬಿಟ್ಟುಬಿಡಬೇಕು. ಅವರು ಹಿಂಜರಿದಾಗ ಮಾತ್ರ ಅವರ ಕೈಗಳನ್ನು ನಾವು ಗಟ್ಟಿಯಾಗಿ ಹಿಡಿಯಬೇಕು.

*ಪಾಲಕತ್ವದ ಅತಿ ಮುಖ್ಯವಾದ ಪಾಠ ಎಂದರೆ ಮಕ್ಕಳನ್ನು ಅವರ ಇಷ್ಟದಂತೆ ಬಿಟ್ಟು ಬಿಡುವುದು. ಇದೊಂದು ನಂಬಿಕೆಯ ಮತ್ತು ಭರವಸೆಯ ಕ್ರಿಯೆ. ಅವರ ಮೇಲೆ ನಾವು ಇಟ್ಟಿರುವ ನಂಬಿಕೆ ಅವರು ದಾರಿ ತಪ್ಪದೇ ಇರಲು ಮತ್ತು ತಮ್ಮದೇ ಆದ ಜೀವನದ ಪಯಣವನ್ನು ಬೆಳೆಸಲು ಬೇಕಾದ ಅರ್ಹತೆಯನ್ನು ನೀಡಿದರೆ, ಭರವಸೆಯು ಜೀವನದಲ್ಲಿ ಹೆಚ್ಚಿನ ವಿಷಯಗಳನ್ನು ಕಲಿಯಲು ಪ್ರೇರೇಪಿಸುತ್ತದೆ.. ನಮ್ಮ ಮಕ್ಕಳು ನಾವು ಬದುಕಿನಲ್ಲಿ ಸಾಧಿಸಲಾಗದ ಆಕಾಂಕ್ಷೆಗಳನ್ನು ಪೂರೈಸುವ ಉಪಕರಣಗಳಲ್ಲ. ಅವರು ತಮ್ಮದೇ ಆದ ಬದುಕಿನ ಗುರಿಗಳನ್ನು ಹೊಂದಿರುವ ಪ್ರಪಂಚ ಜೀವಿಗಳು ನಮಗೆ ಸಾಧ್ಯವಾದರೆ ನಾವು ಅವರ ಜೊತೆ ಜೊತೆಗೆ ಬದುಕಿನ ಹಾದಿಯಲ್ಲಿ ಸಾಗಿ ಅವಶ್ಯಕತೆ ಇದ್ದಾಗ ನಮ್ಮ ಸಹಾಯ ಸಹಕಾರವನ್ನು ನೀಡಬೇಕೇ ಹೊರತು ಅವರಿಗಿಂತ ಮುಂದೆ ನಾವೇ ನಡೆದು ಅವರ ಹಾದಿಯನ್ನು ಸುಗಮಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬಾರದು.



* ಇನ್ನು ಸಂಬಂಧಗಳ ವಿಷಯಕ್ಕೆ ಬಂದರೆ ಮಕ್ಕಳು ನಮ್ಮ ಪ್ರತಿಬಿಂಬ ಎಂಬುದನ್ನು ನಾವು ಮರೆಯಬಾರದು. ನಮ್ಮ ಸಂಗಾತಿಯೊಂದಿಗೆ ನಮ್ಮ ಪ್ರೀತಿ ಮತ್ತು ಸೌಹಾರ್ದಯುತ ಸಂಬಂಧವನ್ನು ಮಕ್ಕಳು ಗಮನಿಸುತ್ತಿರುತ್ತಾರೆ. ಮಕ್ಕಳ ಪಾಲನೆ ಪೋಷಣೆಯ ಜೊತೆ ಜೊತೆಗೆ ಪಾಲಕರು ತಮ್ಮ ಸಂಗಾತಿಯಲ್ಲಿ ಪ್ರೀತಿ ಮತ್ತು ಬದ್ಧತೆಯನ್ನು ಹೊಂದಿರಲೇಬೇಕು. ಪ್ರೀತಿಪೂವ ರ್ಕ ಮತ್ತು ಪರಸ್ಪರ ಹೊಂದಾಣಿಕೆ ಇರುವ ಸಂಬಂಧವು ಮಕ್ಕಳಲ್ಲಿ ಸಾಂಗತ್ಯದ ಕುರಿತಾದ ಉನ್ನತ ಭಾವನೆಗಳನ್ನು ನಿರ್ಮಿಸುತ್ತದೆ ಮತ್ತು ಕೌಟುಂಬಿಕ ಬಂಧಗಳನ್ನು ಹೆಚ್ಚಿಸುತ್ತದೆ.

* ಮಕ್ಕಳೊಂದಿಗೆ ಪಾಲಕರು ಹೊಂದಿರುವ ಸಂಬಂಧವು ಸಮಯ ಸರಿದಂತೆ ಸುಂದರವಾಗಿ ಅರಳುತ್ತದೆ. ಮೊದಮೊದಲು ಪಾಲಕರನ್ನು ಎಲ್ಲ ವಿಷಯಗಳಲ್ಲಿಯೂ ಅವಲಂಬಿಸುತ್ತಿದ್ದ ಮಕ್ಕಳು ಮುಂದೆ ಪರಸ್ಪರ ಗೌರವ ಮತ್ತು ವಿಶ್ವಾಸವನ್ನು ಹೊಂದುತ್ತಾರೆ. ತಮ್ಮದೇ ಆದ ಹಾದಿಗಳನ್ನು ಹುಡುಕಿಕೊಂಡು ಅವರು ಮುಂದೆ ಸಾಗುತ್ತಾರೆ ನಿಜ, ಆದರೆ ಸಾಂಗತ್ಯ ಮತ್ತು ಪಾಲಕತ್ವದ ವಿಷಯದಲ್ಲಿ ಅವರು ತಮ್ಮ ಪಾಲಕರನ್ನು ಅವರಿಗರಿವಿಲ್ಲದೆ ಹಿಂಬಾಲಿಸುತ್ತಾರೆ. ಇದೇ ರೀತಿಯ ಸರಪಳಿ ಕ್ರಿಯೆ ಮುಂದುವರೆಯುತ್ತದೆ ಮತ್ತು ಈ ರೀತಿಯಲ್ಲಿ ಕೌಟುಂಬಿಕವಾಗಿ ಮುಂದುವರೆಯುವುದರಲ್ಲಿಯೇ ಬದುಕಿನ ನಿಜವಾದ ಸೌಂದರ್ಯ ಅಡಗಿದೆ.

* ಮಕ್ಕಳು ಭಾವನಾತ್ಮಕವಾಗಿ ನಮ್ಮೊಂದಿಗೆ ಮಿಳಿತಗೊಂಡಿರುತ್ತಾರೆ ಆದರೆ ಈ ಬಂಧನ ಮುಂದೆ ಬಹಳ ದಿನಗಳ ಕಾಲ ನಮ್ಮೊಂದಿಗೆ ಇರುವುದಿಲ್ಲ. ಅವರು ಬೇರೊಬ್ಬರೊಂದಿಗೆ ಈ ಬಂಧನವನ್ನು ಹೊಂದಿದಾಗ ಅದನ್ನು ಭರಿಸುವ ಮತ್ತು ನಿಭಾಯಿಸುವ ಕಲೆಯನ್ನು ಪಾಲಕರು ಕಲಿಯಲೇಬೇಕು. ನಾವು ನಮ್ಮ ಮಕ್ಕಳನ್ನು ಕಳೆದುಕೊಳ್ಳುತ್ತೇವೆ ಎಂದು ಭಾವಿಸಬಾರದು... ಮಕ್ಕಳ ಪ್ರೀತಿಯು ಮತ್ತಷ್ಟು ವಿಸ್ತಾರ ಗೊಳ್ಳುತ್ತಿದೆ ಎಂಬ ಭಾವವನ್ನು ಹೊಂದಬೇಕು ಮತ್ತು ನಾವು ಕೂಡ ಮಕ್ಕಳಿಗೆ ಅವರ ಪ್ರೀತಿಯೊಂದಿಗೆ ಮುಂದಿನ ಬದುಕನ್ನು ನಡೆಸಲು ಅವಕಾಶ ಮಾಡಿಕೊಡಬೇಕು.

*ಮಕ್ಕಳ ಬೆಳವಣಿಗೆಯನ್ನು ಸಂಭ್ರಮದಿಂದ ಎದುರುಗೊಳ್ಳುವಂತೆ ಅವರ ಪ್ರೀತಿ ಮತ್ತು ಸಾಂಗತ್ಯವನ್ನು ಕೂಡ ಅಷ್ಟೇ ಸಂಭ್ರಮ ಮತ್ತು ಸಡಗರದಿಂದ ಎದುರುಗೊಳ್ಳಬೇಕು. ಇದು ನಮ್ಮದೇ ಪ್ರೀತಿ, ನಂಬಿಕೆ ಮತ್ತು ಭರವಸೆಯ ಮುಂದುವರೆದ ಭಾಗ ಎಂಬುದನ್ನು ಮರೆಯಬಾರದು

*ಪಾಲಕರಾಗಿ ನಾವು ನಮ್ಮ ಮನೆ ಮತ್ತು ಮನಗಳು ಮಕ್ಕಳಿಲ್ಲದ ನಿರ್ವಾತದಿಂದ, ಮಕ್ಕಳಿಂದ ದೂರವಾಗುವ ಪ್ರಕ್ರಿಯೆಗೆ ಹೊಂದಿಕೊಳ್ಳಬೇಕು. ಮಕ್ಕಳು ನಮಗೆ ಕರೆ ಮಾಡುತ್ತಿಲ್ಲ ಎಂದು ಬೇಸರಗೊಳ್ಳುವ ಅವಶ್ಯಕತೆ ಇಲ್ಲ. ನಿಧಾನವಾಗಿ ನಮ್ಮ ಅವಶ್ಯಕತೆ ಅವರ ಬದುಕಿನಲ್ಲಿ ಕಡಿಮೆಯಾಗುವ ಸಮಯವಿದು. ಆದರೆ ನೆನಪಿಡಿ ಪಾಲಕರು ಮತ್ತು ಮಕ್ಕಳ ಬಾಂಧವ್ಯ ಮಾತ್ರ ಸಮಯಾತೀತವಾದದ್ದು. ಯಾವುದೇ ರೀತಿಯಾದ ದೈಹಿಕ ಮತ್ತು ಭಾವನಾತ್ಮಕ ದೂರವು ಇದನ್ನು ಮುರಿಯಲಾಗದು.

ಇದೀಗ ಮಕ್ಕಳೊಂದಿಗೆ ಪರಸ್ಪರ ಗೌರವ ಮತ್ತು ನಮ್ಮ ಉಪಸ್ಥಿತಿಯಲ್ಲಿ ಮಕ್ಕಳು ಹೆಚ್ಚಿನ ಶಕ್ತಿ, ಸಾಮರ್ಥ್ಯಗಳನ್ನು ಹೊಂದಿದ್ದೇವೆ ಎಂದು ಭಾವಿಸುವಂತಹ ಬಾಂಧವ್ಯ ಪಾಲಕರ ಮತ್ತು ಮಕ್ಕಳ ನಡುವೆ ಇರಬೇಕು. ಅವಶ್ಯಕತೆ ಇಲ್ಲದೆ ಮಕ್ಕಳಿಗೆ ಯಾವುದೇ ಸಲಹೆಗಳನ್ನು ನೀಡಬಾರದು. ಮಕ್ಕಳು ಯಾವುದೇ ರೀತಿಯ ಸಲಹೆ ನೀಡಬಾರದು.

* ನಮ್ಮ ಸಂಗಾತಿಯೊಂದಿಗೆ ಮಾತ್ರ ಅತ್ಯಂತ ಪ್ರೀತಿಪೂರ್ವಕ ಬಾಂಧವ್ಯ ನಮ್ಮದಾಗಿರಬೇಕು. ಮಕ್ಕಳು ತಮ್ಮ ಬದುಕಿನಲ್ಲಿ ಮುಂದೆ ಸಾಗಿ ಮನೆಯೆಂಬ ಗೂಡಿನಿಂದ ಹಾರಿ ಹೊರಟು ಹೋದಾಗ ನಾವು ದಂಪತಿಗಳು ಮಾತ್ರ ಹಿಂದೆ ಉಳಿಯುತ್ತೇವೆ. ಯಾರೊಂದಿಗೆ ನಮ್ಮ ಇಡೀ ಬದುಕನ್ನು ಕಳೆಯುತ್ತೇವೆ ಎಂದು ಧಾರ್ಮಿಕ ವಿಧಿ ವಿಧಾನಗಳ ಮೂಲಕ ಸಪ್ತಪದಿ ತುಳಿದಿರುತ್ತೇವೆಯೋ ಅವರೊಂದಿಗೆನ ಸಂಬಂಧದಲ್ಲಿ ಕಾಳಜಿ ಮತ್ತು ಪ್ರೀತಿಪೂರ್ವಕ ನಡವಳಿಕೆಗಳನ್ನು ಹೊಂದಿರಬೇಕು. ಪಾಲಕರಾಗಿ ನಾವು ಮಕ್ಕಳೊಂದಿಗೆ ತೀವ್ರ ವ್ಯಸ್ತರಾಗಿದ್ದಾಗಲೂ ಕೂಡ ದಾಂಪತ್ಯದಲ್ಲಿನ ಪ್ರೀತಿ, ವಿಶ್ವಾಸ ಮತ್ತು ಬಾಂಧವ್ಯದ ಬಿಸುಪು ಎಂದೂ ಮರೆಯಾಗದಂತೆ ಕಾಳಜಿ ವಹಿಸಬೇಕು.... ಕಾರಣ ದಾಂಪತ್ಯ ಎಂಬುದು ಜೀವನದ ಎಲ್ಲಾ ಹಂತಗಳಲ್ಲಿಯೂ ನಮ್ಮ ಜೊತೆಗಿರುವ ಬಂಧ... ನಮ್ಮ ಮಕ್ಕಳು ನಮ್ಮಿಂದ ಅಗಲಿದಾಗಲೂ ಪರಸ್ಪರ ಕಾಳಜಿ ಮತ್ತು ಪ್ರೀತಿಪೂರ್ವಕ ಸಾಂಗತ್ಯವನ್ನು ಹೊಂದಿದ ದಂಪತಿಗಳು ಸಂತುಷ್ಟರಾಗಿ ಇರಲು ಸಾಧ್ಯ

ಪಾಲಕತ್ವ ಎಂಬುದು ಕೇವಲ ಕೊಡುತ್ತಲೇ ಸಾಗುವ ಒಂದು ಪಯಣ... ನಮ್ಮ ಪ್ರೀತಿಯನ್ನು, ಸಮಯವನ್ನು, ನಮ್ಮ ಮುಂದಿನ ಜನಾಂಗವನ್ನು ಸುರಕ್ಷಿತವಾಗಿ ಬೆಳೆಸಿ ಒಳ್ಳೆಯ ನಾಗರಿಕರನ್ನಾಗಿ ನೀಡುವ ಈ ಪಾಲಕತ್ವದ ಪಯಣದಲ್ಲಿ ನಾವು ಮಕ್ಕಳ ಜೊತೆ ಜೊತೆಗೆ ನಮ್ಮ ವೈಯುಕ್ತಿಕ ಸಂಬಂಧಗಳನ್ನು ಕೂಡ ಬದ್ಧತೆಯಿಂದ ಕಾಯ್ದುಕೊಳ್ಳಬೇಕು. ಮಕ್ಕಳು ಬೆಳೆದು ದೊಡ್ಡವರಾಗಿ ತಮ್ಮ ಮುಂದಿನ ಬದುಕನ್ನು ಅರಸಿ ಹೊರಟು ಹೋದಾಗಲೂ ಕೂಡ ಕೊನೆಯವರೆಗೆ ನಮ್ಮೊಂದಿಗೆ ಉಳಿಯುವುದು ನಮ್ಮ ಸಂಗಾತಿ ಮಾತ್ರ. ಆದ್ದರಿಂದ ನಮ್ಮ ಜೀವಿತದ ಕೊನೆಯವರೆಗೂ ಇರುವ ಈ ದಾಂಪತ್ಯದ ಸಂಬಂಧವನ್ನು ಕುಟುಂಬದ ಭದ್ರಬುನಾದಿಯಾಗಿಸಬೇಕು.

ಇನ್ನು ಪಾಲಕರಾದವರು ತಮ್ಮ ಮಕ್ಕಳಿಗೆ ತಾವು ಕೊಡಬಹುದಾದ ಅತ್ಯುತ್ತಮ ಉಡುಗೊರೆ ಎಂದರೆ ತಾವು ದಂಪತಿಗಳು ಹೊಂದಿರಬಹುದಾದ ಆರೋಗ್ಯಕರವಾದ ಮತ್ತು ಪ್ರೀತಿಪೂರ್ವಕ ಸಾಂಗತ್ಯವನ್ನು. ತಮ್ಮ ಪಾಲಕರ ಉತ್ತಮ ದಾಂಪತ್ಯ ಬದುಕು ಮಕ್ಕಳಿಗೆ ಸಾಂಗತ್ಯದ ಶಕ್ತಿಯನ್ನು ತೋರುತ್ತದಲ್ಲದೇ ತಾವು ಕೂಡ ತಮ್ಮ ಬದುಕಿನಲ್ಲಿ ಅಂತಹ ಒಂದು ಗಟ್ಟಿಯಾದ ಬಾಂಧವ್ಯವನ್ನು ಹೊಂದಲು ಸಹಾಯ ಮಾಡುತ್ತದೆ. ಪ್ರೀತಿಯ ಜೊತೆ ಜೊತೆಗೆ ಸ್ವತಂತ್ರ ಮತ್ತು ಪರಸ್ಪರ ಗೌರವಗಳು ಕೂಡ ದಾಂಪತ್ಯದಲ್ಲಿ ಇರುತ್ತವೆ ಎಂಬುದರ ಅರಿವನ್ನು ಮಕ್ಕಳಿಗೆ ಮೂಡಿಸುತ್ತದೆ

ನಮ್ಮ ಮಕ್ಕಳು ನಮ್ಮ ಸಂಗಾತಿಗಳಲ್ಲ ನಿಜ ಆದರೆ ಅವರು ತಮ್ಮದೇ ಆದ ಅರ್ಥಪೂರ್ಣವಾದ ಮತ್ತು ದೀರ್ಘಕಾಲೀನ ದಾಂಪತ್ಯ ಜೀವನವನ್ನು ಹೊಂದಲು ಪಾಲಕರು ಅವರಿಗೆ ಅತ್ಯುತ್ತಮ ಉದಾಹರಣೆಗಳಾಗಿರಬೇಕು.

ಹೌದಲ್ಲವೇ ಸ್ನೇಹಿತರೆ! ಎಷ್ಟೋ ಬಾರಿ ನಾವು ಮಕ್ಕಳನ್ನು ಬೆಳೆಸುವ ನಿಟ್ಟಿನಲ್ಲಿ ಪಾಲಕರು ಪರಸ್ಪರ ಕಿತ್ತಾಡುವುದನ್ನು ಮತ್ತು ಜಗಳವಾಡುವುದನ್ನು ನೋಡುತ್ತೇವೆ. ಆದರೆ ಹಾಗೆ ಅವರಿಬ್ಬರೂ ಕಿತ್ತಾಡುವಾಗ ನಮಗೆ ಆ ಜಗಳದ ಹಿಂದೆ ತಮ್ಮ ಮಕ್ಕಳನ್ನು ಸರಿಯಾದ ನಿಟ್ಟಿನಲ್ಲಿ ಬೆಳೆಸಬೇಕಾದ ಕಾಳಜಿ ಮತ್ತು ಹಠವನ್ನು ಮಾತ್ರ ಆ ದಂಪತಿಗಳಲ್ಲಿ ಇರುವುದನ್ನು ನಾವು ಕಾಣುತ್ತೇವೆ.ನಾವು ನಮ್ಮ ಮಕ್ಕಳಿಗೆ ಬದುಕಿನ ಉತ್ತಮ ವಿಷಯಗನ್ನು ಸೂಚಿಸುವ ಕೈಮರ (ಹ್ಯಾಂಡ್ ಸಿಗ್ನಲ್) ಆಗಿರಬೇಕು.

ಅಂತಹ ಪಾಲಕತ್ವ ನಮ್ಮದಾಗಿರಲಿ ಎಂದು ಆಶಿಸುವ.

**– ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ, ಗದಗ್**

# ಒಳಮೀಸಲಾತಿ ಹಂಚಿಕೆ ಅನ್ಯಾಯ ಸರಿಪಡಿಸಲು ಹೋರಾಟ

**ಬೆಂಗಳೂರು, ಸೆ.6–** ಪರಿಶಿಷ್ಟ ಸಮುದಾಯಗಳ ಒಳಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯವಾಗಿದ್ದು, ಒಳ ಮೀಸಲಾತಿ ವಂಚಿತ ಸಮುದಾಯಗಳಿಗೆ ನ್ಯಾಯ ಕೊಡಿಸಲು ಬಿಜೆಪಿ ಹೋರಾಟ ನಡೆಸಲಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜಕೀಯ ಲಾಭಕ್ಕಾಗಿ ಒಳಮೀಸಲಾತಿ ಜಾರಿ ಮಾಡಿದ್ದಾರೆ. ಒಳ ಮೀಸಲಾತಿ ಜಾರಿ ಸಂದರ್ಭದಲ್ಲಿ ಸುಪ್ರೀಂಕೋರ್ಟ್‌ನ ಆದೇಶ ಹಾಗೂ ನ್ಯಾಯಮೂರ್ತಿ ನಾಗಮೋಹನ್‌ದಾಸ್ ವರದಿ ಪಾಲನೆಯಾಗಿಲ್ಲ. ಇದರ ವಿರುದ್ಧ ಬಿಜೆಪಿ ಹೋರಾಟ ನಡೆಸಲಿದೆ ಎಂದರು.


ಪರಿಶಿಷ್ಟ ಸಮುದಾಯದ ಒಳ ಮೀಸಲಾತಿ ಹಂಚಿಕೆ ಸರಿಯಿಲ್ಲ. ಸರ್ಕಾರ ಕೂಡಲೇ ಒಳ ಮೀಸಲಾತಿ ಹಂಚಿಕೆಯನ್ನು ಸರಿಪಡಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಒತ್ತಾಯಿಸಿದರು.

ಪರಿಶಿಷ್ಟ ಸಮುದಾಯಗಳ 101 ಜಾತಿಗಳಲ್ಲಿ ತಳಮಟ್ಟದಲ್ಲಿರುವವರೇ ಅಲೆಮಾರಿಗಳು. ಈ ಸಮುದಾಯಗಳಿಗೆ ಒಳ ಮೀಸಲಾತಿ ಹಂಚಿಕೆಯಿಂದ ಅನ್ಯಾಯವಾಗಿದೆ. ಹಾಗೆಯೇ ಎ.ಕೆ., ಎ.ಡಿ. ವರ್ಗಗಳಿಗೂ ಸರ್ಕಾರ ಅನ್ಯಾಯ ಮಾಡಿದೆ. ಒಳಮೀಸಲಾತಿಯಲ್ಲಿ ಸಂಪೂರ್ಣ ಗೊಂದಲವನ್ನು ಸೃಷ್ಠಿ ಮಾಡಿದೆ ಎಂದು ದೂರಿದರು.

ಒಳಮೀಸಲಾತಿ ಸಂಬಂಧ ಈ ಹಿಂದೆ ವರದಿ ಕೊಟ್ಟದ್ದ ನ್ಯಾ. ಸದಾಶಿವ ಆಯೋಗ, ಮಾಧುಸ್ವಾಮಿ ಸಮಿತಿ ಹಾಗೂ ನ್ಯಾ. ನಾಗಮೋಹನ್‌ದಾಸ್ ಆಯೋಗದ ಶಿಫಾರಸ್ಸುಗಳನ್ನೆಲ್ಲಾ ಗಾಳಿಗೆ ತೂರಿದೆ. ಜತೆಗೆ ಸುಪ್ರೀಂ ಕೋರ್ಟ್ ಆದೇಶದ ಪಾಲನೆಯನ್ನು ಮಾಡಿಲ್ಲ. ಈ ಮೂಲಕ ಎಸ್ಸಿ ಸಮುದಾಯಗಳಿಗೆ ಕಾಂಗ್ರೆಸ್ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು.

ನಾನು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಪರಿಶಿಷ್ಟರ ಮೀಸಲಾತಿಯನ್ನು ಶೇ. 17ಕ್ಕೆ ಹೆಚ್ಚಿಸಲಾಯಿತು. ಇದಕ್ಕೆ ಹಲವರ ವಿರೋಧ ಇದ್ದರೂ ನಾವು ಆ ಸಮುದಾಯದ ಪರವಾಗಿ ತೀರ್ಮಾನ ಮಾಡಿದ್ದೆವು. ಈಗ ಶೇ. 1 ರಷ್ಟು ಹೆಚ್ಚಿಸಿ ಎಲ್ಲರಿಗೂ ನ್ಯಾಯ ಕೊಡುವ ಪ್ರಯತ್ನ ಮಾಡುವಿರಾ ಎಂದು ಬೊಮ್ಮಾಯಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕೀಯ ಇಚ್ಛಾಶಕ್ತಿ



ಪ್ರದರ್ಶಿಸಿ ಅತ್ಯಂತ ಕನಿಷ್ಠ ಸಮುದಾಯಗಳಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು. ರಾಜಕೀಯ ನಿರ್ಣಯ ಕೈಗೊಳ್ಳುವುದಾದರೆ ಆಯೋಗಗಳನ್ನು ಏಕೆ ಮಾಡಬೇಕಿತ್ತು ಅವರು ಪ್ರಶ್ನಿಸಿದರು.

ಒಳ ಮೀಸಲಾತಿ ಹಂಚಿಕೆಯಲ್ಲಿ ಕಾಂಗ್ರೆಸ್ ಸರ್ಕಾರ ರಾಜಕೀಯ ನಡೆ ಇಟ್ಟಿದೆ. ಒಳಮೀಸಲಾತಿ ಹಂಚಿಕೆ ಅನ್ಯಾಯದ ಬಗ್ಗೆ ಪ್ರಶ್ನಿಸಿದರೆ ನ್ಯಾಯಾಲಯಕ್ಕೆ ಹೋಗಿ ಎನ್ನುತ್ತಿದ್ದಾರೆ. ಸಮುದಾಯಗಳ ಬಗ್ಗೆ ಜಗಳ ಹಚ್ಚುವ ಅಪಖ್ಯಾತಿ ಸಿದ್ದರಾಮಯ್ಯನವರ ಮೇಲೆ ಬರಲಿದೆ ಎಂದರು.

ಸುಪ್ರೀಂ ಕೋರ್ಟ್ 2024ರ ಡಿಸೆಂಬರ್‌ನಲ್ಲಿ ಒಳಮೀಸಲಾತಿ ಕುರಿತಂತೆ ನೀಡಿರುವ ತೀರ್ಪಿನಲ್ಲಿ ಅಸಮಾನರನ್ನು ಪ್ರಬಲರ ಜತೆ ಸೇರಿಸಿ ಮೀಸಲಾತಿ ಹಂಚಬಾರದು ಎಂದು ಹೇಳಿದೆ. ಆದರೆ ರಾಜ್ಯ ಸರ್ಕಾರ ಶೇ. 6, ಶೇ. 5 ಹೀಗೆ ಒಳಮೀಸಲಾತಿ ಹಂಚಿಕೆ ಮಾಡಿ ಕೈ ಬಿಟ್ಟಿದೆ ಎಂದು ಅಸಮಾಧಾನ ಹೊರ ಹಾಕಿದರು.

ಸರ್ಕಾರ ಕೂಡಲೇ ಒಳಮೀಸಲಾತಿ ಹಂಚಿಕೆಯನ್ನು ಸರಿಪಡಿಸಿ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

ಅನ್ಯಾಯಕ್ಕೆ ಒಳಗಾದ ಸಮುದಾಯಗಳ ಜತೆ ಬಿಜೆಪಿ ನಿಲ್ಲಲಿದೆ. ನಾವು ಕಾನೂನು ಸೇರಿದಂತೆ ಎಲ್ಲ ಹೋರಾಟಕ್ಕೂ ಸಿದ್ದರಿದ್ದೇವೆ. ಒಳಮೀಸಲಾತಿ ಹಂಚಿಕೆ ಸರಿಯಾಗಬೇಕು. ಇದು ನಮ್ಮ ಬೇಡಿಕೆ. ಹಾಗೆಯೇ ನ್ಯಾ. ನಾಗಮೋಹನ್‌ದಾಸ್ ಆಯೋಗ ನೀಡಿರುವ ವರದಿ ಯಥಾವತ್ತಾಗಿ ಜಾರಿಯಾಗಬೇಕು ಎಂದು ಅವರು ಆಗ್ರಹಿಸಿದರು.

# ಟ್ರಂಪ್ ನಡೆ ಮೋದಿ ಶ್ಲಾಘನೆ

**ನವದೆಹಲಿ,ಸೆ.6–**ಭಾರತ–ಅಮೆರಿಕ ಸಂಬಂಧ ಸುಧಾರಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್‌ಟ್ರಂಪ್ ನಡೆ ಶ್ಲಾಘನೀಯ ಎಂದು ಪ್ರಧಾನಿ ನರೇಂದ್ರಮೋದಿ ಹೇಳಿದ್ದಾರೆ.

ಭಾರತ ಹಾಗೂ ಅಮೆರಿಕ ನಡುವೆ ವಿಶೇಷ ಬಾಂಧವ್ಯವಿದೆ. ನನಗೂ ಮೋದಿಗೂ ಉತ್ತಮ ಸ್ನೇಹ ಸಂಬಂಧವಿದೆ. ಸ್ವಲ್ಪ ಕಾಯಿರಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್‌ಟ್ರಂಪ್ ಹೇಳಿಕೆ ಬೆನ್ನಲ್ಲೇ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರಮೋದಿ ಅವರು, ಭಾರತ–ಅಮೆರಿಕ ಸಂಬಂಧ ಸುಧಾರಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್‌ಟ್ರಂಪ್ ಅವರ ಧನಾತ್ಮಕ ನಡೆಯನ್ನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತೇನೆ ಎಂದಿದ್ದಾರೆ.

ಡೊನಾಲ್ಡ್‌ಟ್ರಂಪ್ ಅವರ ಭಾವನೆಗಳನ್ನು ಮತ್ತು ನಮ್ಮ ಸಂಬಂಧಗಳ ಬಗ್ಗೆ ಅವರು ಸಕರಾತ್ಮಕ ಮೌಲ್ಯಮಾಪನ ಮಾಡಿದ್ದನ್ನು ನಾನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತೇನೆ ಎಂದು ಮೋದಿ ಬರೆದುಕೊಂಡಿದ್ದಾರೆ.

ಸಮಗ್ರ ಹಾಗೂ ಜಾಗತಿಕ ಕಾರ್ಯತಂತ್ರದ ಸಹಭಾಗಿತ್ವಕ್ಕೆ ಭಾರತ–ಅಮೆರಿಕ ಸಕರಾತ್ಮಕವಾಗಿ ಎದುರು ನೋಡುತ್ತಿವೆ ಎಂದು ಪ್ರಧಾನಿ ನರೇಂದ್ರಮೋದಿ ತಿಳಿಸಿದ್ದಾರೆ.

ಟ್ರಂಪ್ ಹೇಳಿದ್ದೇನು?

ನಾನು ಪ್ರಧಾನಿ ನರೇಂದ್ರಮೋದಿ ಜತೆ ಎಂದಿಗೂ ಸ್ನೇಹಿತನಾಗಿರುತ್ತೇನೆ. ಅವರು ಅದ್ಭುತ ಪ್ರಧಾನಿ, ಆದರೆ, ಅವರು ಈಗ ಮಾಡುತ್ತಿರುವುದು ನನಗೆ ಇಷ್ಟವಾಗುತ್ತಿಲ್ಲ. ಆದರೂ ಅಮೆರಿಕ–ಭಾರತದ ನಡುವೆ ವಿಶೇಷ ಬಾಂಧವ್ಯವಿದೆ. ಯಾವುದಕ್ಕೂ ತಲೆ ಕೆಡಿಸಿಕೊಳ್ಳಬೇಕಿಲ್ಲ ಸ್ವಲ್ಪ ಸಮಯ ಕಾಯಿರಿ ಎಂದು ಟ್ರಂಪ್ ನಿನ್ನೆ ಹೇಳಿದ್ದರು.

ಭಾರತದ ಮೇಲಿನ ಸುಂಕಾಸ್ತ್ರ ಹಾಗೂ ರಷ್ಯಾದಿಂದ ಕಚ್ಚಾತೈಲ ಖರೀದಿ ಸಂಬಂಧ ಭಾರತ–ಅಮೆರಿಕ ನಡುವೆ ಸಂಬಂಧಗಳು ಬಿಗಡಾಯಿಸಿರುವಾಗಲೇ ಟ್ರಂಪ್ ಅವರು ಪ್ರಧಾನಿ ನರೇಂದ್ರಮೋದಿ ಅವರನ್ನು ಹೊಗಳಿ ಭಾರತದ ಜತೆ ವಿಶೇಷ ಬಾಂಧವ್ಯವಿದೆ ಎಂದು ಹೇಳುವ ಮೂಲಕ ಮೃದು ಧೋರಣೆ ತಾಳಿರುವುದು ಮುಂದಿನ ದಿನಗಳಲ್ಲಿ ಭಾರತ–ಅಮೆರಿಕ ನಡುವಿನ ಸಂಬಂಧಗಳು ಸುಧಾರಿಸುವ ಸಂಕೇತವಾಗಿವೆ ಎಂದು ಹೇಳಲಾಗಿದೆ.

ಭಾರತ ಜತೆ ಸಂಬಂಧ ಸುಧಾರಣೆಗೆ ಸಿದ್ಧರಿರುವಿರಾ ಎಂಬ ಪ್ರಶ್ನೆಗೆ ಓವೆಲ್‌ನ ತಮ್ಮ ಕಚೇರಿಯಲ್ಲಿ ಉತ್ತರ ನೀಡಿ ಭಾರತದೊಂದಿಗೆ ವಿಶೇಷ ಸಂಬಂಧ ಇದೆ. ಎರಡೂ ದೇಶಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಿಲ್ಲ. ಸ್ವಲ್ಪ ಕಾಯಿರಿ ಎಂದು ಅವರು ಉತ್ತರಿಸಿ ನಾನು ನರೇಂದ್ರಮೋದಿ ಜತೆ ಎಂದಿಗೂ ಸ್ನೇಹಿತ ನಾಗಿರುತ್ತೇನೆ. ಅವರು ಅದ್ಭುತ ಪ್ರಧಾನಿ ಆದರೆ ಅವರು ಮಾಡುತ್ತಿರುವುದು




ಇಷ್ಟವಾಗುತ್ತಿಲ್ಲ. ರಷ್ಯಾದಿಂದ ಭಾರತವು ಭಾರಿ ಪ್ರಮಾಣದಲ್ಲಿ ತೈಲ ಖರೀದಿ ಮಾಡುತ್ತಿರುವುದು ತೀವ್ರ ನಿರಾಸೆ ಮೂಡಿಸಿದೆ ಎಂದು ಅವರು ಹೇಳಿದ್ದಾರೆ.

ರಷ್ಯಾದಿಂದ ಭಾರತ ತೈಲ ಖರೀದಿ ಮಾಡುತ್ತಿರುವುದರ ಬಗ್ಗೆ ನಾನು ತಿಳಿಸಿದ್ದೇನೆ ಕೂಡ. ನಾವು ಭಾರತಕ್ಕೆ ಶೇ. 50ರ ಸುಂಕವನ್ನು ಹೇರಿದ್ದೇವೆ ನನ್ನ ಹಾಗೂ ಮೋದಿ ಅವರ ನಡುವೆ ಉತ್ತಮ ಸಂಬಂಧವಿದೆ. 2 ತಿಂಗಳ ಹಿಂದೆ ಅವರು ಇಲ್ಲಿಗೆ ಬಂದಿದ್ದರು ಎಂದು ಟ್ರಂಪ್ ಹೇಳಿದ್ದಾರೆ.

ಭಾರತ ಹಾಗೂ ಇತರ ದೇಶಗಳ ನಡುವಿನ ವ್ಯಾಪಾರ ಹೇಗೆ ನಡೆಯುತ್ತಿದೆ ಎಂಬ ಪ್ರಶ್ನೆಗೆ ಅವುಗಳು ಉತ್ತಮವಾಗಿ ಸಾಗುತ್ತಿದೆ. ಎಲ್ಲ ರಾಷ್ಟ್ರಗಳೊಂದಿಗೂ ದೊಡ್ಡ ರೀತಿಯಲ್ಲಿ ಸಾಗುತ್ತಿದೆ. ಆದರೆ, ಗೂಗಲ್‌ಗೆ ಭಾರಿ ದಂಡ ವಿಧಿಸುವ ಐರೋಪ್ಯ ಒಕ್ಕೂಟದ ನಿರ್ಧಾರದ ಬಗ್ಗೆ ಬೇಸರಗೊಂಡಿದ್ದೇವೆ ಎಂದು ಅವರು ಹೇಳಿದರು.

ಭಿನ್ನಾಭಿಪ್ರಾಯ, ಪಾಲುದಾರಿಕೆಯನ್ನು ದುರ್ಬಲಗೊಳಿಸಲು ಜಾಗತಿಕ ಪಾಲುದಾರರ ನಡುವೆ ಸಾಂದರ್ಭಿಕ ಭಿನ್ನಾಭಿಪ್ರಾಯಗಳು ಸ್ವಾಭಾವಿಕ ಈ ಬಗ್ಗೆ ಚಿಂತಿಸಲು ಏನೂ ಇಲ್ಲ ಎಂದು ಟ್ರಂಪ್ ಹೇಳಿದ್ದಾರೆ.

## ಚಿತ್ರ ಸುದ್ದಿಗಳು



**ಮಾನ್ವಿ,ಸೆ.6–** ಪಟ್ಟಣದ ಗಾಂಧಿ ಕಾಲೇಜಿನಲ್ಲಿ ಲಾಯನ್ಸ್ ಕ್ಲಬ್ ಮಾನ್ವಿ ವತಿಯಿಂದ ಶಿಕ್ಷಕರ ದಿನಾಚರಣೆ ಅಂಗವಾಗಿ "ಗುರುವಂದನಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ತಾಲ್ಲೂಕಿನ ಹಲವಾರು ಶಿಕ್ಷಕರಿಗೆ ಸನ್ಮಾನಿಸಲಾಯಿತು. ಈ ಸಂಧರ್ಭದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೂಷ್ಟೂರಿನ ಸಹ ಶಿಕ್ಷಕಿ ಶ್ರೀಮತಿ ಝುರೀನಾ ಅವರಿಗೆ "ಉತ್ತಮ ಶಿಕ್ಷಕರು" ಎಂದು ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.




**ರಾಯಚೂರು,ಸೆ.6–**ಸಾಂಸ್ಕೃತಿಕ ನಾಯಕ ಬಸವಣ್ಣನವರ ಬಸವ ಸಂಸ್ಕೃತಿ ಅಭಿಯಾನ ರಥವನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ರಾಯಚೂರು ನಗರದಲ್ಲಿ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಬಸವರಾಜ ಗದಗಿನ ಜಿಲ್ಲಾ ಆಯುಕ್ತರು (ಸ್ಕೌ), ಅಂಬಣ್ಣ ನಾಯಕ ಎಸ್.ಜಿ.ವಿ, ಸರ್ಕಾರಿ ಮಹಿಳಾ ಪದವಿ ಕಾಲೇಜು ರಾಯಚೂರು ಸರಸ್ವತಿ ರೇಂಜರ್ ಲೀಡರ್ಸ್ , ವೈ.ನರಸಿಂಹ ರೋವರ್ ಸ್ಕೌಟ್ ಲೀಡರ್, ಸೋಮಶೇಖರ ರೋವರ್ ಹಾಗೂ ರೇಂಜರ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಟೈರ್ ಬ್ಲಾಸ್ಟ್ ಹೊತ್ತಿ ಉರಿದ ಲಾರಿ



**ಜಮಖಂಡಿ,ಸೆ.6–** ತಾಲೂಕಿನ ಸಿದ್ದಾಪುರ ಗ್ರಾಮದ ಮುಧೋಳ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಸಿಮೆಂಟ ಲಾರಿ ಟ್ಯಾಂಕರ ಟೈರಗಳು ಕಾಯ್ದು ಆಕಸ್ಮಿಕವಾಗಿ ಬೆಂಕಿ ಹತ್ತಿ ಲಾರಿಯ ಮುಂದಿನ ಭಾಗ ಸುಟ್ಟು ಕರಕಲಾಗಿದೆ

ಅದೃಷ್ಟವಶಾತ್ ಯಾವುದೇ ಪ್ರಾಣಪಾಯ ಸಂಭವಿಸಿಲ್ಲ ಎಂದು ಮಾಹಿತಿ ತಿಳಿದು ಬಂದಿದೆ.

ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ತಾಲೂಕಿನ ಚಾಲಕ ಜಗದೀಶ ಗುರಪ್ಪ ಪಾಟೀಲ ಸಿಮೆಂಟ ಟ್ಯಾಂಕರ ಲಾರಿಯನ್ನು ಲೋಕಾಪೂರ ಕಡೆಯಿಂದ ಮುಧೋಳ ಹಾಗೂ ಜಮಖಂಡಿ ಮಾರ್ಗವಾಗಿ ಮಹಾರಾಷ್ಟ್ರಕ್ಕೆ ಹೋಗುವ ಸಂಧರ್ಭದಲ್ಲಿ ಸಿದ್ದಾಪೂರ ಗ್ರಾಮದ ರಸ್ತೆ ಮೇಲೆ ಅಕಸ್ಮೀಕವಾಗಿ ಲಾರಿಗೆ ಬೆಂಕಿ ಹೊತ್ತಿ ಕೊಂಡಿದೆ ಎಂದು ತಿಳಿದು ಬಂದಿದೆ.

ಸ್ಥಳಕ್ಕೆ ಅಗ್ನಿಶಾಮಕ ದಳ ಸಿಬ್ಬಂದಿಗಳು ಆಗಮೀಶಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಜಮಖಂಡಿ ಗ್ರಾಮೀಣ ಪೊಲೀಸ ಠಾಣೆ ಪೋಲಿಸರು ಭೇಟಿ ನೀಡಿ, ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ

# ಶಾಲಾ ಬಸ್ ಹರಿದು ಬಾಲಕಿ ಸಾವು



**ಬೀದರ್, ಸೆ.6–** ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಎಕ್ಕಂಬಾ ಗ್ರಾಮದಲ್ಲಿ ಖಾಸಗಿ ಶಾಲಾ ಬಸ್ ಹರಿದು ಯುಕೆಜಿಯಲ್ಲಿ ಓದುತ್ತಿದ್ದ 6 ವರ್ಷದ ಬಾಲಕಿ ಸಾವನ್ನಪ್ಪಿದ ಹೃದಯವಿದ್ರಾವಕ ಘಟನೆ ಜರುಗಿದೆ.

ಮೃತ ಬಾಲಕಿಯನ್ನು ಕಾವೇರಿ ಆಕಾಶ್ ಎಂದು ಗುರುತಿಸಲಾಗಿದೆ. ವಿದ್ಯಾರ್ಥಿನಿ ಶಾಲಾ ಬಸ್ ನಿಂದ ಇಳಿಯುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಎಕ್ಕಂಬಾದ ಸೇಂಟ್ ಪಾಲ್ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಓದುತ್ತಿದ್ದ ಬಾಲಕಿ ಎಂದಿನಂತೆ ಬಸ್‌ನಲ್ಲಿ ಶಾಲೆಗೆ ಹೋಗಿದ್ದು ಶಾಲಾ ಆವರಣದಿಂದ ಬಸ್ ಇಳಿಯುವಾಗ ಆಯತಪ್ಪಿ ಬಸ್‌ನಿಂದ ಬಿದ್ದ ವೇಳೆ ಅದೇ ಬಸ್ ಅವಳ ಮೇಲೆ ಹರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯ ದುರಂತ ಸಾವಿಗೆ ಚಾಲಕನ ನಿರ್ಲಕ್ಷ್ಯವೇ ಕಾರಣ ಎಂದು ಹೇಳಲಾಗುತ್ತಿದೆ. ನಿರ್ಲಕ್ಷ್ಯದ ಚಾಲಕನ ವಿರುದ್ಧ ಔರಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಚಿವರಾದ ಬೋಸರಾಜು ಸಂಘಟನೆಯವರಿಗೆ ಕ್ಷಮೆ ಕೋರಲಿ : ರಾಜಾ ವೆಂಕಟಪ್ಪ ನಾಯಕ

ಯುವ ಮಾರ್ಗ ಸುದ್ದಿ



**ಸಿರವಾರ, ಸೆ.6–** ಸಾರ್ವಜನಿಕರು ಟ್ಯಾಕ್ಸ್ ಹಣ, ಸರಕಾರದ ಹಣ, ಸಾರ್ವಜನಿಕರ ಓಡಾಟಕ್ಕೆ ಮಾಡುವ ಕಾಮಗಾರಿ ಬಗ್ಗೆ ಪ್ರಶ್ನೆ ಮಾಡುವ ಹಕ್ಕು ಸಂಘಟನೆಗಳಿಗೆ ಇದೆ, ಸಚಿವರಾದ ಎನ್.ಎಸ್. ಭೋಸರಾಜು ಸಂಘಟನೆಯ ಪದಾಧಿಕಾರಿಗಳಿಗೆ, ಅವಮಾನಕರ ರೀತಿಯಲ್ಲಿ ನಡೆದುಕೊಂಡಿದ್ದು ಸರಿಯಲ್ಲ, ಸಂಘಟನೆಯ ಪದಾಧಿಕಾರಿಗಳಲ್ಲಿ ಕಮೆ ಕೋರಬೇಕು ಎಂದು ಮಾಜಿ ಶಾಸಕ ರಾಜಾ ವೆಂಕಪ್ಪ ನಾಯಕ ಹೇಳಿದರು.

ಅವರು ಗುರುವಾರ ತಹಶೀಲ್ದಾರರ ಕಚೇರಿಯ ಮುಂದೆ ಸಿರವಾರ–ದೇವದುರ್ಗ ಮುಖ್ಯ ರಸ್ತೆಯ ಅಗಲಿಕರಣ, ಚರಂಡಿ, ಬೀದಿ ದೀಪಾ ಅಳವಡಿಕೆ ಕಾಮಗಾರಿ 2.85ಕೋಟಿ ಕಾಮಗಾರಿ ಅನುಮೋದನೆ ಪ್ರಕಾರ ರಸ್ತೆಯ ಅಗಲಿಕರಣ 50ಪೀಟ್ ಮಾಡಬೇಕು ಎಂದು ಸಿರವಾರ ಅಭಿವೃದ್ಧಿ ತಾಲ್ಲೂಕು ಹೋರಾಟ ಸಮಿತಿಯ ಪದಾಧಿಕಾರಿಗಳ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಮಾತನಾಡಿ ರಸ್ತೆಯ ಪಕ್ಕದ ಅಂಗಡಿಗಳು ಸ್ವಯಂ ಪ್ರೇತವಾಗಿ 50ಅಡಿಗೆ ರಸ್ತೆಯ ತೆರವು ಮಾಡಿಕೊಂಡಿದ್ದು, ಈ ಕಾಮಗಾರಿ ನಿರ್ವಹಣೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ವಹಿಸಿಕೊಂಡಿದ್ದು, ಗೋವಿಂದರಾಜ ನಾಯ್ಕ್ ಗುತ್ತಿಗೆಯನ್ನು ನೀಡಲಾಗಿದೆ, ಆದರೆ ರಸ್ತೆಯ ಅಗಲಿಕರಣ 37.ಅಡಿಗೆ ಚರಂಡಿ ನಿರ್ಮಾಣ ಕಾರ್ಯ ಮಾಡಲಾಗುತ್ತದೆ, ಇದರಿಂದ ರಸ್ತೆಯ ಅಳತೆ ಕಡಿಯಾಗುತ್ತದೆ, ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತದೆ, 50ಅಡಿ ಅಗಲಿಕರಣ, ಗುಣಮಟ್ಟದ ಕಾಮಗಾರಿ ಮಾಡಬೇಕು, ತಮ್ಮ ಅವಧಿಯಲ್ಲಿ ಸಿರವಾರ ಅಭಿವೃದ್ಧಿಗೆ ಹಾಗೂ ಪಟ್ಟಣದಲ್ಲಿ ಮಾಡಲಾದ ಕಾಮಗಾರಿ ಬಗ್ಗೆ ಸಭೆಯಲ್ಲಿ ತಿಳಿಸಿದರು.

ನಂತರ ಸಂಘಟನೆಯ ಪದಾಧಿಕಾರಿಗಳು ಮಾತನಾಡಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಕೇವಲ 500 ಮೀಟರ್ ರಸ್ತೆಯ ಅಭಿವೃದ್ಧಿಗೆ 2.86ಕೋಟಿ ರೂಪಾಯಿ ನಿಗದಿಯಾಗಿದೆ, ಇದರಿಂದ ಸರಕಾರದ ಹಣವನ್ನು ಅಧಿಕಾರಿಗಳು, ಗುತ್ತೆದಾರರು ವಂಚನೆ ಮಾಡಲು ಹುನ್ನಾರ ರೂಪಿಸಿದ್ದಾರೆ, ಎಂದು ಸರಣಿಯಲ್ಲಿ ಬೆಂಬಲ ನೀಡಿದ, ಕೆಆರ್ .ಎಸ್, ಕರವೇ, ದಲಿತ ಸಂಘಟನೆಯ ಪದಾಧಿಕಾರಿಗಳು ಆರೋಪಿಸಿದರು.

ಈ ಸಂದರ್ಭದಲ್ಲಿ ಕೆ.ಆರ್.ಎಸ್ ಸಂಘಟನೆಯ ರಾಜ್ಯಾಧ್ಯಕ್ಷ ಡಿ.ಎಚ್.ಪೂಜಾರಿ, ಜಿಲ್ಲಾಧ್ಯಕ್ಷ ಅಶೋಕ ನೀಲಗಲ್, ಚಿಟ್ಟಿಬಾಬು, ಬಿ.ಎಸ್.ಯರದಾಳ, ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ, ರಾಜಾ ಆದರ್ಶ ನಾಯಕ, ಹುಲೀಗೆಪ್ಪ ಮಡಿವಾಳ, ಬಸವರಾಜ ಭಂಡಾರಿ, ಅರಳಪ್ಪ ಯದ್ದಲದಿನ್ನಿ, ಕೆ.ರಾಘವೇಂದ್ರ, ವೆಂಕಟೇಶ ದೇವತಗಲ್, ಕೆ.ನಾಗರಾಜ, ಹನುಮಂತ ಕುಂಬಾರ ಸೇರಿದಂತೆ ಹಲವು ಸಂಘಟನೆಯ ಪದಾಧಿಕಾರಿಗಳು, ತಹಶಿಲ್ದಾರರ ಅಶೋಕ ಪವಾರ್, ಪ.ಪಂ.ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ಎಇಇ ಗೋಪಾಲಯ್ಯ ಇದ್ದರು.

# ಶಾರದಾಂಬೆ ಮಾನವಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ 5ನೇ ವಾರ್ಷಿಕ ಮಹಾಸಭೆ

ಯುವ ಮಾರ್ಗ ಸುದ್ದಿ



**ಮಾನ್ವಿ,ಸೆ.6–** ಪಟ್ಟಣದ ಶಾರದಾಂಬೆ ಮಾನವಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ 5 ನೇ ವಾರ್ಷಿಕ ಮಹಾ ಸಭೆಯನ್ನು ಸಹಕಾರಿಯ ಅಧ್ಯಕ್ಷರಾದ ವೈ ಸುರೇಶಗೌಡ ಉದ್ಘಾಟಿಸಿ ಮಾತನಾಡಿ, ಸಹಕಾರಿಯ ಕಳೆದ 5 ವರ್ಷಗಳಿಂದ ಸದಸ್ಯರಿಗೆ ಅಗತ್ಯವಿರುವ ವಿವಿಧ ಉದ್ದೇಶಗಳಿಗೆ ಆರ್ಥಿಕ ನೆರವನ್ನು ನೀಡುವುದರ ಜೊತೆಗೆ ಸಾಮಾಜಿಕ,ಶೈಕ್ಷಣಿಕ ,ಧಾರ್ಮಿಕ ಕಾರ್ಯಕ್ರಮಗಳಿಗೂ ಕೂಡ ಅಗತ್ಯ ನೆರವನ್ನು ನೀಡುತ್ತ ಬಂದಿದೆ. ಸಹಕಾರಿಯು 2116 ಸದಸ್ಯರನ್ನು ಹೊಂದಿದ್ದು 2024–25 ನೇ ಸಾಲಿನಲ್ಲಿ 56 ಲಕ್ಷ ಷೇರು ಬಂಡವಾಳ, ಠೇವಣಿಗಳು23 ಕೋಟಿ 26 ಲಕ್ಷ ಹೊಂದಿದೆ.25 ಕೋಟಿ ದುಡಿಯುವ ಬಂಡವಾಳವನ್ನು ಹೊಂದಿದೆ. ಸದಸ್ಯರಿಗೆ 21 ಕೋಟಿ 68 ಲಕ್ಷ ಗಳಷ್ಟು ಸಾಲ ಮತ್ತು ಮುಂಗಡಗಳನ್ನು ನೀಡಿದ್ದು ಸದಸ್ಯರ ಹಾಗೂ ಸಿಬ್ಬಂದಿಗಳ ಸಹಕಾರದಿಂದಾಗಿ ಈ ಸಾಲಿನಲ್ಲಿ ಸಹಕಾರಿಯು 56 ಲಕ್ಷ ಲಾಭವನ್ನು ಹೊಂದಿದ್ದು ಸದಸ್ಯರಿಗೆ ಲಾಭಂಶದಲ್ಲಿ ಶೇ15 ರಷ್ಟು ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಸುರೇಶ ಸಂಗಾಪುರ, ಸಿ.ಇ.ಓ. ರಾಜಕುಮಾರ,ವ್ಯಸ್ಥಾಪಕರಾದ ವಿಜಯ ಕುಮಾರ ಹಿರಿಯರಾದ ಶಿವಯ್ಯಸ್ವಾಮಿ, ಶಂಕ್ರಯ್ಯಸ್ವಾಮಿ ಸುವರ್ಣಗಿರಿ ಮಠ ಹಾಗೂ ನಿರ್ದೇಶಕರಾದ ಚಂದ್ರಶೇಖರ ಗೌಡ, ವೀರಭದ್ರಯ್ಯಸ್ವಾಮಿ, ಪರಶುರಾಮಕೇಸರಿ, ವಿಜಯಕುಮಾರ, ಮಲ್ಲಿನಾಥ, ಮೌನೇಶ, ಈರಣ್ಣ ತಳವಾರ, ಸತ್ಯಪ್ಪ, ಪ್ರಕಾಶ ಹಿರೇಮಠ,ಮಲ್ಲಮ್ಮ ಮಲ್ಲಿನಾಥ,ಮಾಲಾಶ್ರೀ, ಗಂಗಮ್ಮ ವೀರಭದ್ರಪ್ಪ, ಗಂಗಮ್ಮ ಮೌನೇಶ,ಡಾ.ಸುರೇಂದ್ರ ಬಲ್ಲಟಗಿ ಸೇರಿದಂತೆ ಸಹಕಾರಿಯ ಸದಸ್ಯರು ಸಿಬ್ಬಂದಿಗಳು ಇದ್ದರು.

# ರಸ್ತೆಗೆ ಅಡ್ಡಲಾಗಿ ನಿಲ್ಲುವ ದನಗಳನ್ನು ಗೋಶಾಲೆಗೆ ಕಳುಹಿಸಿ: ಹನುಮೇಶನಾಯಕ ಜೇನೂರು

ಯುವ ಮಾರ್ಗ ಸುದ್ದಿ



**ಮಾನ್ವಿ,ಸೆ.6–**ಪಟ್ಟಣದ ಪುರಸಭೆ ಕಚೇರಿಯಲ್ಲಿ ಭಾರತೀಯ ಜನತಾ ಪಾರ್ಟಿ ಮಾನ್ವಿ ಮಂಡಲ ವತಿಯಿಂದ ಪುರಸಭೆ ಮುಖ್ಯಾಧಿಕಾರಿಗಳಿಗೆ ವ್ಯವಸ್ಥಾಪಕರಾದ ಈರಣ್ಣ ರವರ ಮೂಲಕ ಮನವಿ ಸಲ್ಲಿಸಿ ಬಿ,ಜೆ,ಪಿ, ಪ್ರಾ.ಕಾರ್ಯದರ್ಶಿ ಹನುಮೇಶನಾಯಕ ಜೇನೂರು ಮಾತನಾಡಿ, ಮಾನ್ವಿ ಪಟ್ಟಣದ ಮುಖ್ಯ ರಸ್ತೆಯ ಮೇಲೆ ಪ್ರತಿನಿತ್ಯ ನೂರಾರು ಬಿಡಾಡಿ ದನಗಳು ರಸ್ತೆಗೆ ಅಡ್ಡಲಾಗಿ ನಿಲ್ಲುವ ಮೂಲಕ ವಾಹನ ಸಾವರರಿಗೆ ಹಾಗೂ ವಾಹನ ಸಂಚಾರಕ್ಕೆ ಅಡಿಪಡಿಸುತ್ತಿರುವುದರಿಂದ ಪ್ರತಿನಿತ್ಯ ಅಪಘಾತಗಳು ಸಂಭವಿಸುತಿವೇ ಅದ್ದರಿಂದ ಬಿಡಾಡಿ ದನಗಳನ್ನು ಹಾಗೂ ಕರುಗಳನ್ನು ಗೋಶಾಲೆಗೆ ಕಳುಹಿಸುವ ಮೂಲಕ ಸಾರ್ವಜನಿಕರ ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡುವಂತೆ ಒತ್ತಾಯಿಸಿದರು.

ವಿಶ್ವನಾಥ.ಬಿ.ನಂದಿಹಾಳ್ ವಕೀಲರು, ಸುಧರ್ಶನ್, ಚಂದ್ರಶೇಖರ, ವೆಂಕಟೇಶ.ಕೆ. ಜಗದೀಶ್ ಕುರ್ಡಿ, ಚಂದ್ರು ಜಾನೆಕಲ್, ಕರೀಮ್,ನಾಗರಾಜು ಭಂಡಾರಿ ,ವೀರೇಶನಾಯಕ ವಿಜಯ್ ಕುಮಾರ, ಈರಣ್ಣ ನಾಯಾಕ,ಕಿರಣ್ ಕುಮಾರ, ಸೇರಿದಂತೆ ಇನ್ನಿತರರು ಇದ್ದರು

# ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಶ್ರೀ ಪಂಪಾ ವಿರೂಪಾಕ್ಷೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಉತ್ತಮ ಸಾಧನೆ

ಯುವ ಮಾರ್ಗ ಸುದ್ದಿ



**ಮಾನ್ವಿ,ಸೆ.6–**ಪಟ್ಟಣದ ಶ್ರೀ ಪಂಪಾ ವಿರೂಪಾಕ್ಷೇಶ್ವರ ಸಂಯುಕ್ತ ಪದವಿಪೂರ್ವ ಕಾಲೇಜು ಕಲ್ಮಠದ ವಿದ್ಯಾರ್ಥಿಗಳು ಪದವಿಪೂರ್ವ ಶಿಕ್ಷಣ ಇಲಾಖೆ ರಾಯಚೂರು ಹಾಗೂ ಸರಕಾರಿ ಪದವಿ ಪೂರ್ವ ಕಾಲೇಜು , ಬ್ಯಾಗವಾಟ್ ಮತ್ತು ಪೋತ್ನಾಳ್ ಇವರ ಸಂಯುಕ್ತಾಶ್ರಯದಲ್ಲಿ ಮಾನ್ವಿಯಲ್ಲಿ ನಡೆದ ಪದವಿ ಪೂರ್ವ ವಿದ್ಯಾರ್ಥಿಗಳ 2025 –26 ನೇ ಸಾಲಿನ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ಉತ್ತಮ ಸಾಧನೆಯನ್ನು ತೋರಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುವುದಕ್ಕೆ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀವಿರೂಪಾಕ್ಷ ಪಂಡಿತರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಅಭಿನಂದಿಸಿದ್ದಾರೆ.

ಬಾಲಕರ ಗುಂಪು ಆಟಗಳಾದ ವಾಲಿಬಾಲ್ ಮತ್ತು ಖೋ ಖೋ ಕ್ರೀಡೆಗಳಲ್ಲಿ ಪ್ರಥಮ ಸ್ಥಾನವನ್ನು ಬಾಲಕರ ತಂಡ ಗಳಿಸಿದ್ದು. ವೈಯಕ್ತಿಕ ಆಟಗಳಾದ ಉದ್ದ ಜಿಗಿತದಲ್ಲಿ ಹಾಗೂ 200 ಮೀಟರ್ ಓಟದಲ್ಲಿ ಬಸವರಾಜ್ ಪ್ರಥಮ ಸ್ಥಾನ, ಬರ್ಚಿ ಎಸೆತದಲ್ಲಿ ರಾಮಕೃಷ್ಣ ದ್ವಿತೀಯ ಸ್ಥಾನಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆ ಯಾಗಿರುವುದಕ್ಕೆ ವಿದ್ಯಾರ್ಥಿಗಳನ್ನು ಕಾಲೇಜಿನಲ್ಲಿ ಅಭಿನಂದಿ ಸಲಾಯಿತು.

ಕಾಲೇಜಿನ ಪ್ರಾಚಾರ್ಯ ಎಸ್. ಎಸ್ ಪಾಟೀಲ್, ಆಡಳಿತಾಧಿಕಾರಿ ಸಂಗಯ್ಯ ಸ್ವಾಮಿ, ದೈಹಿಕ ಉಪನ್ಯಾಸಕ ವಿರುಪಣ್ಣ ಪಾಟೀಲ್ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಸೆಪ್ಟೆಂಬರ್ 9ರಂದು ಪೂರ್ವಭಾವಿ ಸಭೆ

**ರಾಯಚೂರು,ಸೆ.6–** ಜಿಲ್ಲಾಡಳಿತದಿಂದ ಜಿಲ್ಲಾ ಕೇಂದ್ರದಲ್ಲಿ ಸೆ.17 ರಂದು ನಡೆಯುವ ಕಲ್ಯಾಣ ಕರ್ನಾಟಕ ಉತ್ಸವ ಆಚರಣೆ ಕುರಿತಂತೆ ಚರ್ಚಿಸಲು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರ ಅಧ್ಯಕ್ಷತೆಯಲ್ಲಿ ಸೆ.09ರ ಬೆಳಿಗ್ಗೆ 11.30ಕ್ಕೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ.

ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು ನಿಗದಿಪಡಿಸಿದ ಸಮಯಕ್ಕೆ ಸಭೆಗೆ ತಪ್ಪದೇ ಹಾಜರಿದ್ದು, ಸಲಹೆ ಸೂಚನೆಗಳನ್ನು ನೀಡಬೇಕೆಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರಿಗೆ ಆರ್ಥಿಕ ನೇರವಿಗೆ ಅರ್ಜಿ ಆಹ್ವಾನ

**ರಾಯಚೂರು,ಸೆ.6–** ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 2025–26ನೇ ಸಾಲಿಗೆ ನೇಕಾರ ಸಮ್ಮಾನ್ ಯೋಜನೆಯಡಿ ಕೈಮಗ್ಗ ಘಟಕಗಳ ನೇಕಾರರಿಗೆ ಆರ್ಥಿಕ ನೇರವು ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ನೇಕಾರ ಸಮ್ಮಾನ್ ಯೋಜನೆಯಡಿ ಕೈಮಗ್ಗ ನೇಕಾರಿಕೆ ಹಾಗೂ ಇತರೆ (ಆಲೈಡ್) ಕೈಮಗ್ಗ ನೇಕಾರಿಕೆ ವೃತ್ತಿಯನ್ನು ಹೊಂದಿದ ನೇಕಾರರಿಗೆ ವಾರ್ಷಿಕವಾಗಿ 5000 ರೂ.ಗಳ ಆರ್ಥಿಕ ನೇರವನ್ನು ಡಿಬಿಟಿ ಮೂಲಕ ನೀಡಲಾಗುತ್ತಿದ್ದು, ಆಸಕ್ತರು ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಪಡೆದು ಸೇವಾ ಸಿಂಧು ತಂತ್ರಾಂಶದಲ್ಲಿ ಸೆಪ್ಟೆಂಬರ್ 15ರೊಳಗಾಗಿ ಅರ್ಜಿ ಸಲ್ಲಿಸಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ರಾಯಚೂರು–584101 ಮೊಬೈಲ್ ಸಂಖ್ಯೆ: 9964001488ಗೆ ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆಪ್ಟೆಂಬರ್ 22ರಿಂದ ಅಕ್ಟೋಬರ್ 1ರವರೆಗೆ ಕನ್ನಡ ಪುಸ್ತಕ ಮೇಳ ಆಯೋಜನ

**ರಾಯಚೂರು,ಸೆ.6–** ಜಗತ್ತಿನ ಪ್ರಸಿದ್ಧ ಮೈಸೂರು ದಸರಾ ಉತ್ಸವ–2025ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ದಸರಾ ಉತ್ಸವ ಸಮಿತಿ, ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 1ರವರೆಗೆ ಮೈಸೂರು ದಸರಾ ಕನ್ನಡ ಪುಸ್ತಕ ಮಾರಾಟ ಮೇಳ–2025ನ್ನು ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆ ಡಿ.ಸಿ. ಕಚೇರಿ ಎದುರು ಏರ್ಪಡಿಸಲಾಗಿದ್ದು, ಪುಸ್ತಕ ಮೇಳದಲ್ಲಿ ಕನ್ನಡ ಪ್ರಕಾಶಕರು, ಮಾರಾಟಗಾರರು ಭಾಗವಹಿಸಬಹುದಾಗಿದೆ.

ಮೇಳದಲ್ಲಿ ಮಳಿಗೆಯೊಂದಕ್ಕೆ 1000 ರೂ.ಗಳ ಭದ್ರತಾ ಠೇವಣಿ ಡಿ.ಡಿ.ಯನ್ನು ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು –ಅವರ ಹೆಸರಿನಲ್ಲಿ ಡಿಡಿಗಳನ್ನು ಸಲ್ಲಿಸಬೇಕು.ಮೇಳದಲ್ಲಿ ಭಾಗವಹಿಸಲು ಇಚ್ಚಿಸುವ ಪ್ರಕಾಶಕರು/ಮಾರಾಟಗಾರರು ನಿಗದಿತ ಅರ್ಜಿ ನಮೂನೆಯನ್ನು ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರಿನ ಕಚೇರಿ ಅಥವಾ ಆಯಾ ಜಿಲ್ಲೆಯಲ್ಲಿರುವ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಛೇರಿಗಳಲ್ಲಿ ಅಥವಾ ಪ್ರಾಧಿಕಾರದ ವೆಬ್‌ಸೈಟ್ ವಿಳಾಸ: https://kpp.karnataka.gov.in ನಲ್ಲಿ ಉಚಿತವಾಗಿ ಪಡೆದುಕೊಂಡು ಭರ್ತಿ ಮಾಡಿದ ಅರ್ಜಿ ಡಿ.ಡಿ.ಯೊಂದಿಗೆ ಸೆಪ್ಟೆಂಬರ್ 18ರ ಸಂಜೆ 5 ಗಂಟೆಯೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು –ಅವರ ಹೆಸರಿಗೆ ಅಂಚೆಯ ಮೂಲಕ ಹಾಗೂ ಇ–ಮೇಲ್ kannadappradhikara@gmail.com ರ ಮೂಲಕ ಸಲ್ಲಿಸಬಹುದಾಗಿದೆ. ನಿರ್ಮಿಸಲಾಗುವ ಮಳಿಗೆಗಳನ್ನು ಆದ್ಯತೆಯ ಮೇರೆಗೆ ಹಂಚಿಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, –560002 ದೂರವಾಣಿ ಸಂಖ್ಯೆ: 080–22484516/22107704ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 1.35 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

**ಕಲಬುರಗಿ,ಸೆ.6–**ಮನೆ ಬೀಗ ಮುರಿದು 1.35 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ಮೇಳಕುಂದಾ (ಬಿ) ಗ್ರಾಮದಲ್ಲಿ ನಡೆದಿದೆ.

ಅಂಬಣ್ಣ ತಳವಾರ ಎಂಬುವವರ ಮನೆ ಬೀಗ ಮುರಿದು ಕಳ್ಳರು 15 ಗ್ರಾಂ.ಬಂಗಾರದ 3 ಉಂಗುರ, 30 ಸಾವಿರ ನಗದು ಸೇರಿ 1.35 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿದ್ದಾರೆ.

ಈ ಸಂಬಂಧ ಫರಹತಾಬಾದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H